ಅಚಲ ತಿಂಗಳ ಪತ್ರಿಕೆ

ಬೆಲೆ - ಬಿಡಿಪ್ರತಿ : 4 ರೂ.

ಜೂನ್ - 2004

25

ಒಳಗೇನಿದೆ

ಜಾಗೃತಿ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಅಚಲ

ಸಂಪುಟ - 19 ಸಂಚಿಕೆ : 5

ಸಂಪಾದಕ ಮಂಡಲಿ
ಎನ್. ಗಾಯತ್ರಿ
ನೇಮಿಚಂದ್ರ, ದೇವಿ,
ಶಾಂತಾನಾಗರಾಜ್
ಹೆಚ್. ಎನ್: ಗೀತಾ
ಹೇಮಲತಾ ಮಹಿಷಿ

ಪ್ರಕಾಶಕರು
ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10 ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by
Dr. N. Gayathri

Published by
Dr. G. Ramakrishna on behalf of Jagruthi Mahila Adhyayana Kendra

Printed at
Lipi Mudrana
Bangalore - 560 004

ಆತ್ಮೀಯರೆ,

ಕಳೆದ 19 ವರ್ಷಗಳಿಂದಲೂ ತಾವುಗಳು ಪ್ರೀತಿ, ಅಭಿಮಾನದಿಂದ ಅಚಲ ಪತ್ರಿಕೆಯನ್ನು ನಿಮ್ಮದಾಗಿಸಿಕೊಂಡು ಪೋಷಿಸುತ್ತಾ ಬಂದಿರುತ್ತೀರಿ. ಮಹಿಳಾ ಚಳುವಳಿಯ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಇನ್ನೂ ಬೆಟ್ಟದಷ್ಟು ಕೆಲಸವಾಗಬೇಕಿದೆ. ಈ ಮಹತ್ತರ ಕಾರ್ಯದಲ್ಲಿ ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಿದೆ. ನೀವೂ ಅಚಲ ಪತ್ರಿಕೆಯನ್ನು ನಿಮ್ಮ ವಿಚಾರಗಳ ವೇದಿಕೆಯನ್ನಾಗಿ ಮಾಡಿಕೊಳ್ಳಿ ಮತ್ತು ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವಲ್ಲಿ ನೆರವಾಗಿ.

ಯಾವುದೇ ವಿವರಗಳನ್ನು ಬರೆಯದ ಚಂದಾಹಣವು ಹಲವಾರು ಎಂ.ಓ ಗಳಲ್ಲಿ ನಮಗೆ ತಲುಪಿದೆ. ಚಂದಾದಾರರು ದಯವಿಟ್ಟು ಎಂ.ಓ ಫಾರ್ಮಿನ ಹಿಂಭಾಗದಲ್ಲಿ ವಿಳಾಸವನ್ನು ಬರೆಯಿರಿ.

ಅಚಲದ ಚಂದಾ ಬದಲಾಗಿದೆ

ವಾರ್ಷಿಕ ಚಂದಾ - ರೂ. 50/- (ವ್ಯಕ್ತಿಗಳಿಗೆ)
ರೂ. 100/- (ಸಂಸ್ಥೆಗಳಿಗೆ)
ಆಜೀವ ಚಂದಾ - ರೂ. 300/- (ವ್ಯಕ್ತಿಗಳಿಗೆ)
ರೂ. 400/- (ಸಂಸ್ಥೆಗಳಿಗೆ)

ಅಚಲ ವಿಳಾಸ

108, ಸ್ಕೈಲೈನ್ ಸುರಭಿ, 14-ಪಿ, ವಿದ್ಯಾಪೀಠ ರಸ್ತೆ
ಬನಶಂಕರಿ 3ನೇ ಹಂತ, ಬೆಂಗಳೂರು - 560 085

ಸಂಪಾದಕೀಯ

ಆತಂಕವಾದವೆಂಬ ನೆಪದ ಹಿಂದೆ

ಇಷ್ರತ್ ಜಹಾನ್, ಮುಂಬಯಿಯ ಗುರುನಾನಕ್ ಖಾಲ್ಸಾ ಕಾಲೇಜಿನ ವಿದ್ಯಾರ್ಥಿನಿ. ತಂದೆ ಮೊಹಮದ್ ಶಾಮೀಮ್ ಎರಡು ವರ್ಷದ ಹಿಂದೆ ತೀರಿಕೊಂಡಾಗ, ಏಳು ಮಕ್ಕಳ ಕುಟುಂಬಕ್ಕೆ ಆಧಾರವಾದ ಎಳೆಯ ಹುಡುಗಿ ಇಷ್ರತ್, ಮಕ್ಕಳಿಗೆ ಮನೆಪಾಠ ಹೇಳಿ ಕೊಟ್ಟು ಆಕೆಯ ದುಡಿಮೆ. ತರಗತಿಗಳಿಗೆ ಎಂದೂ ತಪ್ಪಿಸಿಕೊಳ್ಳದೆ ಬರುತ್ತಿದ್ದ ಇಷ್ರತ್, ಸ್ನೇಹಿತರೊಡನೆ ಸಂತಸದಿಂದ ಬೆರೆತ ಲವಲವಿಕೆಯ ಹುಡುಗಿ. ಮೊದಲ ವರ್ಷದ ಬಿ.ಎಸ್ಸಿ ಸೆಕೆಂಡ್ ಕ್ಲಾಸನಲ್ಲಿ ಪಾಸು ಮಾಡಿದ ಇಷ್ರತ್‌ಗೆ, ಭೌತಶಾಸ್ತ್ರ ಮತ್ತು ಗಣಿತ ಬಲು ಆಸಕ್ತಿಯ ವಿಷಯಗಳು. ಸಹಪಾಠಿಗಳೊಡನೆ ಸ್ನೇಹದಿಂದ ಬೆರೆತ ಹುಡುಗಿ, ತಂದೆಯಿಲ್ಲದ ಸಂಸಾರವನ್ನು ತೂಗಿಸಲು ಹೆಣಗುತ್ತಿದ್ದ ಹುಡುಗಿ, ಕ್ಲಾಸಿಗೆ ತಪ್ಪದೆ ಹೋಗುತ್ತಿದ್ದ ಹುಡುಗಿ, ಓದಿ ಕೆಲಸ ಹಿಡಿಯುವ ಸಣ್ಣ ಸಣ್ಣ ಕನಸುಗಳನ್ನು ಹೊತ್ತ ಈ ಸರಳ ಹುಡುಗಿ, ಆತಂಕವಾದಿಯೆ ?

ಹೌದೆನ್ನುತ್ತಾರೆ ಅಹಮದಾಬಾದಿನ ಪೋಲೀಸರು. 'ಇಲ್ಲ'ವೆಂದು ಚೀರುತ್ತಾರೆ ಆಕೆಯ ಸಹಪಾಠಿಗಳು, ನೆರೆಹೊರೆಯವರು, ಕುಟುಂಬದವರು.

ದಿನಾಂಕ 16 ಜೂನ್, ಪತ್ರಿಕೆಗಳಲ್ಲಿ ದೊಡ್ಡ ಅಕ್ಷರಗಳು ಚೀರಿದವು. 'ಲಕ್ಷರ್ ಎ ತೋಯ್ಬಾದ ಆತಂಕವಾದಿಗಳ ಮೋದಿಯ ಹತ್ಯೆಯ ಸಂಚು ವಿಫಲ'. ಚಿತ್ರದಲ್ಲಿದ್ದದ್ದು ಓರ್ವ ಎಳೆಯ ಪ್ರಾಯದ ಸಲ್ವಾರ್ ಕಮೀಸ್ ತೊಟ್ಟ ಹುಡುಗಿ ಮತ್ತು ಮೂರು ಜನ ಎಳೆಯ ಪ್ರಾಯದ ಯುವಕರು. ಗುಂಡಿನ ಹೊಡೆತದಲ್ಲಿ ರಸ್ತೆಯ ಮೇಲೆ ಅಂಗಾತ ಬಿದ್ದ ಎಳೆಯ ಹುಡುಗಿಯ ಚಿತ್ರ ಕರುಳು ಕಿವುಚುವಂತಿತ್ತು. ತಲೆ ಬರಹ ಚೀರಿದ 'ಆತಂಕವಾದಿ', 'ತಣ್ಣನೆಯ ರಕ್ತದ ಕೊಲೆಯ ಸಂಚಿನ ಆತಂಕವಾದಿ' ಈ ಹುಡುಗಿ ಇಷ್ರತ್ ಎಂದರೆ ನಂಬಲು ಸಾಧ್ಯವೇ ? ಆದದ್ದೇನು, ಸತ್ಯ ಹೇಳಬಹುದಿದ್ದ ಎಳೆಯ ಜೀವಗಳು ಸತ್ತ ಹೆಣಗಳಾಗಿರುವಾಗ, ನಿಜವಾಗಿ ನಡೆದದ್ದೇನು ಎಂದು ಯಾರು ಹೇಳುತ್ತಾರೆ ? ಪೋಲೀಸರ ಏಕಮುಖ ಕತೆಯೇ ಸತ್ಯವೆ ? ಮುಸುಕು ಮುಂಜಾನೆಯಲ್ಲಿ 'ಎನ್‌ಕೌಂಟರ್' ಹೆಸರಲ್ಲಿ ಹೊಡೆದುರುಳಿಸಿ ಮುಗಿಸಿದ ಈ ಘಟನೆ, ಕರ್ನಾಟಕದಲ್ಲಿ ಕಳೆದ ವರ್ಷ ಪೋಲೀಸರ ಇಂತಹುದೇ ಗುಂಡೇಟಿಗೆ ಬಲಿಯಾದ ಸಾಮಾಜಿಕ ಹೋರಾಟಗಾರ್ತಿಯಾದ ಪಾರ್ವತಿ ಮತ್ತು ಹಾಜಿಮಾರ ದುರ್ಮರಣವನ್ನು ನೆನಪಿಗೆ ತರುತ್ತದೆ.

'ಇಷ್ರತ್, ಉಳಿದ ಸಂಗಾತಿಯರೊಡನೆ ಆತ್ಮಹತ್ಯಾ ಹತ್ಯೆಗೆ ತಯಾರಾಗಿ ಹೊರಟಿದ್ದಳು' ಎನ್ನುತ್ತಾರೆ ಅಹಮದಾಬಾದಿನ ಪೋಲೀಸರು. ಆಕೆಯ ದೇಹದ ಮೇಲಿಂದ ಮದ್ದು ಗುಂಡುಗಳು ದೊರೆತವೆ ? ದೇಹಕ್ಕೆ ಕಟ್ಟಿಕೊಂಡ ಆಸ್ಫೋಟಗಳಿದ್ದವೆ ? ನೂರು ಪ್ರಶ್ನೆಗಳಿಗೆ ಇನ್ನೂ ಉತ್ತರಗಳು ದೊರೆತಿಲ್ಲ.

ಸತ್ತವರು ತಮ್ಮೊಡನೆ ಸತ್ಯಗಳನ್ನು ಕೊಂಡೊಯ್ಯುತ್ತಾರೆ. ನೂರು ಪ್ರಶ್ನೆಗಳನ್ನು ಹಿಂದೆ ಬಿಟ್ಟು ಹೋಗುತ್ತಾರೆ. ನಿಜಕ್ಕೂ ಇಷ್ರತ್‌ಳಂತಹ ನಮ್ಮ ನಡುವಿನ ಸಾಮಾನ್ಯ ಹೆಣ್ಣು ಮಗಳು ಆತಂಕವಾದಕ್ಕೆ ಇಳಿದಿದ್ದರೆ, ಒಂದು ಕಾಲೇಜಿನ ವಿದ್ಯಾರ್ಥಿಯಾಗಿ ಆಕೆಯ ಪ್ರಾಧ್ಯಾಪಕರಿಗಾಗಲಿ, ಮನೆಯವರಿಗಾಗಲಿ, ಜೊತೆಯ ಗೆಳತಿಯರಿಗಾಗಲಿ ಒಂದಿನಿತೂ ಸುಳಿವು ಕೊಡದಂತೆ ಆತಂಕವಾದಿಯಾಗಿದ್ದರೆ, ಇದಕ್ಕಿಂತ ದೊಡ್ಡ ಆತಂಕ ಮತ್ತೊಂದಿಲ್ಲ. ನಿಜಕ್ಕೂ ಇಷ್ರತ್ ಆತಂಕವಾದಿಯೆ ?

ಗುಜರಾತಿನಲ್ಲಿ ನಡೆದ ಅತ್ಯಾಚಾರ ಮತ್ತು ಹತ್ಯಾಕಾಂಡ, ಪೋಲೀಸರ ನಿಷ್ಕ್ರಿಯತೆ, ರಾಜಕೀಯ ಕುಮ್ಮಕ್ಕು, ಮೋದಿ ಸರಕಾರದ ನಿರ್ಲಕ್ಷ್ಯವಷ್ಟೆ ಅಲ್ಲ, ಪಶ್ಚಾತ್ತಾಪದ ಪಸೆ ಕೂಡಾ ಇಲ್ಲದ, ಕೊಬ್ಬಿದ ಕೋಮುವಾದಿ ಧೋರಣೆ, ಎಂತಹ ಶಾಂತಿ ಪ್ರಿಯ ಮನಸ್ಸುಗಳನ್ನೂ ಕುದಿಸಿತ್ತು, ಕದಡಿತ್ತು. ಸರಕಾರವೇ ಕೋಮುವಾದಿಗಳ ಪರ ನಿಂತಾಗ 'ನ್ಯಾಯ' ಎಂಬುದು ಬೀದಿಪಾಲಾದಾಗ, ಅಪ್ಪಟ ಅಸಹಾಯಕತೆಯಲ್ಲಿ ಆಕ್ರೋಶದಲ್ಲಿ ಜನಸಾಮಾನ್ಯರು ಹೋರಾಟಕ್ಕಿಳಿಯುತ್ತಾರೆ. ನಿಜ, ಆತಂಕವಾದ ಕೋಮುವಾದಕ್ಕೆ ಉತ್ತರವಲ್ಲ. ಆದರೆ 'ಆತಂಕವಾದಿ'ಗಳನ್ನು ಹುಟ್ಟು ಹಾಕುವ ಸಾಮಾಜಿಕ ಧೋರಣೆಗಳನ್ನು, ಸಹಕಾರದ ರೀತಿ ನೀತಿಗಳನ್ನು, ರಾಜಕೀಯ ತಂತ್ರಗಳನ್ನು ಪರಾಮರ್ಶಿಸಿಕೊಳ್ಳಬೇಕಾದ ಅಗತ್ಯವಿದೆ. ಗುಜರಾತಿನಲ್ಲಿ ಮನೆ, ಮಠ, ಉದ್ಯಮ, ಜೀವನೋಪಾಯ, ಇಡೀ ಕುಟುಂಬವನ್ನೇ ಕಳೆದು ಕೊಂಡ ನೂರಾರು ಜನರಿಗೆ ನ್ಯಾಯ ಒದಗಿಸುವ ಸಣ್ಣ ಪ್ರಯತ್ನವೂ ಕಾಣಲಿಲ್ಲ. ಈ ಸರಕಾರದ ಮೇಲೆಯೆ ನಂಬಿಕೆ ಇಲ್ಲದೆ 'ಬೆಸ್ಟ್ ಬೇಕರಿ' ಯಂತಹ ಕೇಸುಗಳನ್ನು ಗುಜರಾತಿನ ಹೊರಗೆ ವರ್ಗಾಯಿಸಿದ್ದು ನೆನೆಯಬೇಕು.

ಇಂದು ನಮ್ಮೆದುರು ಇರುವ ಮೊದಲ ಪ್ರಶ್ನೆ 'ಇಷ್ರತ್ ನಿಜಕ್ಕೂ ಆತಂಕವಾದಿಯಾಗಿದ್ದಳೆ ?' ಎಂಬುದು. ಆದಾಗಲೇ ಆಕೆಯ

ತಾಯಿಯ ಮೇಲೆ 'ಇಷ್ರತ್ ಆತಂಕವಾದಿ' ಎಂದು ಒಪ್ಪಿಕೊಳ್ಳುವಂತೆ ಪೋಲೀಸರ ಒತ್ತಡ ಏರುತ್ತಿದೆ ಎಂದು ವರದಿಯಾಗಿದೆ. ಇದೇ ಎನ್‌ಕೌಂಟರ್‌ನಲ್ಲಿ ಸತ್ತ ಪ್ರಾಣೇಶ್ ಕುಮಾರ್ ಉರುಫ್ ಜಾವೇದ್ ಗುಲಾಮ್ ಮೊಹಮದ್ ಅವರ ತಂದೆ ಗೋಪಿನಾಥ ಪಿಳ್ಳೆ, 'ಈ ಎನ್‌ಕೌಂಟರ್ ಶುದ್ಧ ಸುಳ್ಳಿನದು' ಎಂದು ಗಟ್ಟಿಯಾಗಿ ನಂಬುತ್ತಾರೆ. ಒಳ್ಳೆಯ ಆದಾಯವಿದ್ದ, ವಿವಾಹಿತ, ಹಿಂದೂ ಧರ್ಮದ ಹಿನ್ನೆಲೆಯ ಪ್ರಾಣೇಶ್ ಕುಮಾರ್, ಮೋದಿಯನ್ನು ಹತ್ಯೆ ಮಾಡಲು ಹೋಗಿದ್ದ ಎಂಬುದು ಈ ತಂದೆಗೆ ನಂಬಲು ಅಸಾಧ್ಯವಾಗಿದೆ. ಈ ಇಡೀ ಘಟನೆಯನ್ನು ಕುರಿತು ಸಿ.ಬಿ.ಐ. ತನಿಖೆಗೆ ಆಗ್ರಹ ಪಡಿಸಿದ್ದಾರೆ.

ಇಷ್ರತ್ ನಿಜಕ್ಕೂ ಆತಂಕವಾದಿಯಾಗಿದ್ದಳೆ ಎಂಬ ಪ್ರಶ್ನೆಗೆ ಉತ್ತರ ನೀಡುವವರಾರು ? ಆಕೆಯನ್ನು, ಆಕೆಯೊಡನಿದ್ದ ಅಷ್ಟೂ ಜನ ಸಂಗಾತಿಯರನ್ನು ಗುಂಡಿಟ್ಟು ಕೊಂದು ಮುಗಿಸಿರುವಾಗ ಪೋಲೀಸರು ಹೇಳಿದ್ದೇ ಸತ್ಯವಾಗುತ್ತದೆ. ಈ ಎನ್‌ಕೌಂಟರ್ ಅನ್ನು ಸದ್ಯದ ರಾಜಕೀಯ ವಿದ್ಯಾಮಾನಗಳ ಹಿನ್ನೆಲೆಯಲ್ಲಿ ನೋಡಬೇಕು. ಗುಜರಾತು ಹೊತ್ತು ಉರಿದಾಗ, ಸರಕಾರ ನಿಂತು ನೋಡಿತು. ಅಂದಿನ ಪ್ರಧಾನ ಮಂತ್ರಿಗಳಿಂದ ಸಣ್ಣ ಪ್ರತಿಭಟನೆ, ಪಶ್ಚಾತ್ತಾಪದ ಮಾತೂ ಹೊರಬಿದ್ದಿರಲಿಲ್ಲವೆಂದರೆ 'ಮೋದಿಯ ಪ್ರಭಾವ' ಎಷ್ಟಿತ್ತೆಂದು ಊಹಿಸಿಕೊಳ್ಳಬಹುದು. ಅಂದು ಮೋದಿ ಮುಂದುವರೆಯುವುದು, ಹಿಂದುತ್ವ ವಾದಕ್ಕೆ, ಚುನಾವಣೆಗೆ ಲಾಭದಾಯಕವಾಗಿ ಕಂಡಿತ್ತು. ಇಂದು ಚುನಾವಣೆಯಲ್ಲಿ ಸೋತು, ಪ್ರಧಾನ ಮಂತ್ರಿಯ ಪದವಿ ಹೋದ ಮೇಲೆ, ಗುಜರಾತಿನ ಬಗ್ಗೆ ಅನುಕಂಪ ಸೂಸಿ, 'ಮೋದಿಯನ್ನು ತೆಗೆದು ಹಾಕಬೇಕಿತ್ತು' ಎಂದು ಹೇಳುವ ಮಾತುಗಳು, ಊರೆಲ್ಲ ಲೂಟಿಯಾದ ಮೇಲೆ ಕೋಟೆ ಬಾಗಿಲು ಮುಚ್ಚಿದ ಹಾಗೆ. ಆದರೆ ಮಾಜಿ ಪ್ರಧಾನ ಮಂತ್ರಿಗಳ ಈ ಮಾತುಗಳು ಥಟ್ಟನೆ ಮೋದಿಯವರ ಕುರ್ಚಿಯನ್ನು ಅಲುಗಾಡಿಸಿದ್ದು, ರಾಜಕೀಯ ರಂಗದಲ್ಲಿ ಬಿಸಿ ಏರಿಸಿದ್ದು ಸುಳ್ಳಲ್ಲ. ಅವರನ್ನು 'ಕಿತ್ತು ಹಾಕಬೇಕೆ, ಇಲ್ಲವೆ' ಎಂಬ ಚರ್ಚೆ ದಿನವೂ ಮುಖಪುಟದಲ್ಲಿ ಬರುತ್ತಿತ್ತು. ಈಗ ನೋಡಿದರೆ ಇಡೀ ಚರ್ಚೆ 'ಲಕ್ಷರ್ ಎ ತೋಬಾದ ಆತಂಕವಾದಿಗಳ ಮೋದಿ ಹತ್ಯೆಯ ಸಂಚಿ'ನತ್ತ ತಿರುಗಿದೆ. 'ಈ ಎನ್‌ಕೌಂಟರ್ ಕೂಡಾ ಮೋದಿಯ ಮೇಲೆ ಕನಿಕರ ಹುಟ್ಟಿಸುವ ಗಿಮಿಕ್ ಆಗಿರಬಾರದೇಕೆ?' ಎಂದು ಪ್ರಶ್ನಿಸುವವರಿದ್ದಾರೆ. ಸತ್ಯ ಹೊರಬೀಳಲು ಬಹಳಷ್ಟು ಸಮಯ ಹಿಡಿಸಬಹುದು.

ಮೇಲಿನ ರಾಜಕೀಯ ಪ್ರಶ್ನೆಗಳಲ್ಲದೆ, ಇಂದು ನಮ್ಮೆದುರು ಮತ್ತಷ್ಟು ಪ್ರಶ್ನೆಗಳಿವೆ. ಶಾಲೆ ಕಾಲೇಜುಗಳಲ್ಲಿ ನಮ್ಮ ಮಕ್ಕಳು ಎಂತಹ ಪ್ರಭಾವಕ್ಕೆ ಬಲಿಯಾಗುತ್ತಿದ್ದಾರೆ ? ದಿನಬೆಳಗಾದರೆ ಪತ್ರಿಕೆಯಲ್ಲಿ, ದೂರದರ್ಶನದಲ್ಲಿ ಬಿತ್ತರಿಸಲ್ಪಡುವ ಅತ್ಯಾಚಾರಗಳು, ಅಪರಾಧಗಳು ಎಳೆಯ ಮನಸ್ಸುಗಳ ಮೇಲೆ ಯಾವ ರೀತಿ ಪರಿಣಾಮ ಬೀರುತ್ತಿವೆ ? ಮುಗ್ಧ ಮನಸ್ಸುಗಳನ್ನು ಕಂಡು ಆತಂಕವಾದಿ ಗುಂಪುಗಳು ತಮ್ಮ ಲಾಭಕ್ಕೆ, ತಮ್ಮ ಸಂಕುಚಿತ ಧ್ಯೇಯಕ್ಕೆ ಬಳಸಿಕೊಳ್ಳುತ್ತಿದ್ದಾರೆಯೆ ? ಪ್ರತಿಯೊಂದು ಶಾಲೆ, ಕಾಲೇಜು, ತನ್ನ ವಿದ್ಯಾರ್ಥಿಗಳು ತೆಗೆಯುವ ಅಂಕಗಳ ಬಗ್ಗೆ ಎಲ್ಲಿಲ್ಲದ ಕಳಕಳಿ ವ್ಯಕ್ತಪಡಿಸುತ್ತದೆ. ಐ.ಐ.ಟಿ.ಗೆ, ಸಿ.ಇ.ಟಿ.ಗೆ ತಯಾರಿಯೋ ತಯಾರಿ. ಈ ಶಾಲೆ ಕಾಲೇಜುಗಳಲ್ಲಿ ಓದಿನಾಚಿನ ತಿಳುವಳಿಕೆ ಏನಾದರೂ ನೀಡುವ ಪ್ರಯತ್ನವಿದೆಯೆ ? ಮಕ್ಕಳಲ್ಲಿ ರಾಜಕೀಯ ಪ್ರಜ್ಞೆಯಂತೆಯೆ, ಸಹನೆಯನ್ನು, ಸಂಯಮವನ್ನು, ಕೋಮುಸೌಹಾರ್ದವನ್ನು ಕಲಿಸುವ ಯತ್ನವಿದೆಯೆ ? ತಮ ಮಕ್ಕಳ ಅಂಕಗಳತ್ತ ಮಾತ್ರ ಗಮನ ಹರಿಸುವ ತಾಯ್ತಂದೆಯರು, ಆ ಮಗುವಿಗೆ ಎಂತಹ ಸ್ನೇಹಿತರಿದ್ದಾರೆ, ಎಲ್ಲಿಗೆ ಹೋಗುತ್ತಾಳೆ, ಆಕೆಯ ಮನಸ್ಸಿನಲ್ಲಿ ಏನೆಲ್ಲ ಪ್ರಶ್ನೆಗಳಿವೆ ಎಂದು ತಿಳಿದುಕೊಳ್ಳಲು ಯತ್ನಿಸುತ್ತಾರೆಯೆ ? ಸುತ್ತಲಿನ ಸಂದರ್ಭವನ್ನು ಮಕ್ಕಳಿಗೆ ವಿವರಿಸಿ ಹೇಳುವ ವ್ಯವಧಾನವಿದೆಯೆ ?

ಸಹನೆಯ, ತಾಳ್ಮೆಯ, ದಿಟವಾದ ಶಾಂತಿಯುತ ಜಾತ್ಯಾತೀತ ಸಮಾಜವನ್ನು ಸೃಷ್ಟಿಸುವಲ್ಲಿ ತಂದೆ ತಾಯಿಯರ, ಶಾಲೆ ಕಾಲೇಜುಗಳ ಜವಾಬ್ದಾರಿ ಎಷ್ಟು ? ಕೇವಲ ಅವರು ತೆಗೆಯುವ ಅಂಕಗಳ ಮೇಲಷ್ಟೆ ಒತ್ತಡ ಹೇರುವ ಶಾಲೆ ಕಾಲೇಜುಗಳು, ನಮ್ಮ ಪರಿಸರದಿಂದ ಮಕ್ಕಳು ಏನೆಲ್ಲ ಹೀರಿಕೊಳ್ಳುತ್ತಿದ್ದಾರೆ, ಪರಿಸರದ ಋಣಾತ್ಮಕ ಪ್ರಭಾವವನ್ನು ಕಳೆಯುವುದು ಹೇಗೆ ಎಂದು ಗಮನ ಹರಿಸಬೇಕಲ್ಲವೆ ?

ಹಾದಿಯಲ್ಲಿ ಹೆಣವಾಗಿ ಬಿದ್ದ ಈ ಇಷ್ರತ್ ಆತಂಕವಾದಿ ಎಂದು ಸಾಬೀತಾದರೆ ಅದಕ್ಕೆ ಯಾರನ್ನು ದೂರಬೇಕು ? ಇಂತಹ ಎಳೆಯ ಜೀವಗಳು ಆತಂಕವಾದಕ್ಕೆ ವಾಲುವಂತೆ ಮಾಡಿದ ಸಂದರ್ಭಗಳನ್ನು ಮರೆಯಲು ಸಾಧ್ಯವೆ ? ಮೂಲದ ಆಳದ ಕೋಮುವಾದದ ರೋಗವನ್ನು ಬೇರು ಸಮೇತ ಕಿತ್ತು ಒಗೆಯದೆ, ಇಂತಹ ನೂರು ಸಾವಿರ ಇಷ್ರತರನ್ನು ಗುಂಡಿಟ್ಟು ಕೊಂದರೂ ಆತಂಕವಾದವನ್ನು ತಡೆ ಹಿಡಿಯಲು ಸಾಧ್ಯವಾಗುವುದೆ ? ಕಾರಣ ಬದುಕುವ ಹಂಗನ್ನೇ ತೊರೆದು ಹೊರಟ ಇವರ ಇಚ್ಛಾಶಕ್ತಿಯ ವಿರುದ್ಧ ಯಾರು ನಿಲ್ಲಬಲ್ಲರು.

ಚುನಾವಣೆಯ ಕ್ಷಣಿಕ ಲಾಭದ ಹಿಂದೆ ಬೀಳುವ ರಾಜಕೀಯ ಪಕ್ಷಗಳು ಸಾಮಾನ್ಯರ ಮನೆ ಮನೆಗಳಲ್ಲೂ ಆತಂಕವಾದಿಗಳನ್ನು ಹುಟ್ಟು ಹಾಕುತ್ತವೆ. ಈ ಮಕ್ಕಳು ನೇರವಾಗಿ ಸಿಗದ ನ್ಯಾಯದ ಹಪಹಪಿಯಲ್ಲಿ, ಆತಂಕವಾದದ ಹಾದಿ ಹಿಡಿದವರು. ಸಾಮಾಜಿಕ ಕ್ರಾಂತಿಯ ಕನಸು ಕಾಣುವ ಈ ಎಳೆಯ ಜೀವಗಳು ಅಸಹಾಯಕತೆ ಆಕ್ರೋಶದಲ್ಲಿ ಆತಂಕವಾದದ ಹಾದಿಯನ್ನು ಆಯ್ದುಕೊಳ್ಳುತ್ತಾರೆ. ಇಂದಿನ ಮಕ್ಕಳು ಆತಂಕವಾದದ ಹಾದಿಯನ್ನು ಹಿಡಿಯದಂತೆ ಸಮಾಜ ಮತ್ತು ಸರಕಾರ ಎಚ್ಚರವಹಿಸಬೇಕಿದೆ.

-ನೇಮಿಚಂದ್ರ

ಜಾಗತೀಕರಣ : ಮಹಿಳೆಯರ ಪಾಡು

ಅರವತ್ತು ವರ್ಷದ ಸೀತಾ ಪಾಟೀಲ್ ಬೆಳಗಿನ ಹೊತ್ತು ಸಗಟು ಮಾರುಕಟ್ಟೆಗೆ ಹೋಗಿ ಬಿಡಿ ಹೂಗಳನ್ನು ಖರೀದಿಸುತ್ತಾಳೆ ; ಮನೆಗೆ ಬಂದು ಹೂ ಕಟ್ಟುತ್ತಾಳೆ. ಮಧ್ಯಾಹ್ನ ಕಳೆದ ಮೇಲೆ ಅಂಧೇರಿಯಲ್ಲಿರುವ ತನ್ನ ಮನೆಯಿಂದ ಹೊರಟು ದಕ್ಷಿಣ ಮುಂಬೈಯಲ್ಲಿ ಅತ್ಯಂತ ಹೆಚ್ಚಿನ ವಾಹನದಟ್ಟಣೆ ಇರುವ ಸ್ಥಳದವರೆಗೂ ನಡೆದು, ಸಂಜೆಯೆಲ್ಲಾ ನಿಂತಿರುತ್ತಾಳೆ. ಹೂವಿನ ದಂಡೆಗಳನ್ನು ಮಾರುತ್ತಾ ನಿಂತಿರುತ್ತಾಳೆ.

''ಇಲ್ಲಿ ಯಾವುದೂ ಖಚಿತವಿಲ್ಲ. ದಿನವೊಂದಕ್ಕೆ ಮೂವತ್ತೋ ನಲವತ್ತೋ ರೂಪಾಯಿಗಳನ್ನು ಗಳಿಸುವ ಪ್ರಯತ್ನವಷ್ಟೆ'' ಎಂದು ಉಸುರುತ್ತಾಳೆ ಸೀತಾ. ''ಈ ಕೆಲಸ ನನಗೆ ತುಸುವೂ ಇಷ್ಟವಿಲ್ಲ. ಈ ಟ್ರಾಫಿಕ್ ಎಂದರೇನೇ ನನಗೆ ಭಯ. ಆದರೆ ಮನೆಕೆಲಸವನ್ನಂತೂ ನಾನು ಮಾಡಲು ಒಪ್ಪಲಾರೆ.''

ಕೇವಲ ಐದು ವರ್ಷಗಳ ಹಿಂದ ಘಟ್‌ಕೋಪರ್‌ನಲ್ಲಿದ್ದ 1,500 ಕೈಗಾರಿಕಾ ಷೆಡ್‌ಗಳಲ್ಲಿ ಮಹಿಳೆಯರ ಸಂಖ್ಯೆಯೇ 10000 ದಷ್ಟಿತ್ತು. ಸೀತಾ ಪಾಟೀಲ್ ಕೂಡ ಇಲ್ಲಿಯ ಉದ್ಯೋಗಿಯೇ ಆಗಿದ್ದಳು. ಈ ಮಹಿಳೆಯರು ಫಾರ್ಮಾಸ್ಯೂಟಿಕಲ್, ಪ್ಲಾಸ್ಟಿಕ್, ರಬ್ಬರ್, ಷೂ ತಯಾರಿಕೆ, ವಾಹನೋದ್ಯಮ ಹಾಗೂ ಇತರ ಕ್ಷೇತ್ರಗಳಿಗೆ ಬಿಡಿ ಭಾಗಗಳ ಪೂರೈಕೆ ಇತ್ಯಾದಿ ಘಟಕಗಳಲ್ಲಿ ಕೆಲಸ ಮಾಡುತ್ತಿದ್ದರು. ಸೀತಾ ರಬ್ಬರ್ ಚಪ್ಪಲಿಗಳ ತಯಾರಿಕೆಯಲ್ಲಿ ಪರಿಣತಿ ಸಾಧಿಸಿದ್ದಳು. ಅದರಿಂದಾಗಿಯೇ ಅವಳು ತಿಂಗಳಿಗೆ 3500/- ರೂ. ಸಂಪಾದಿಸುತ್ತಿದ್ದಳು.

ಈ ಎಲ್ಲಾ ಕೈಗಾರಿಕಾ ಷೇಡ್‌ಗಳನ್ನು ಮುಚ್ಚಲಾಗಿದೆ ಎನ್ನುತ್ತಾರೆ ನ್ಯಾಷನಲ್ ಸೆಂಟರ್ ಫಾರ್ ಲೇಬರ್‌ನ ಸೆಕ್ರೆಟರಿ ತಂಗಪ್ಪನ್. ಈತ ನ್ಯೂ ಟ್ರೇಡ್ ಯೂನಿಯನ್ ಇನಿಷಿಯೇಟಿವ್‌ನ ಸಹ ಸ್ಥಾಪಕರೂ ಆಗಿದ್ದಾರೆ. ಇವರು ಟ್ರೇಡ್ ಯೂನಿಯನ್ ರಂಗದಲ್ಲಿ 45 ವರ್ಷಗಳಿಂದಿದ್ದಾರೆ. ಕೈಗಾರಿಕೆಗಳು ಬಂದ್ ಆಗಿರುವ ಪ್ರಯುಕ್ತ ಹೆಚ್ಚಿನ ಪೆಟ್ಟು ಬಿದ್ದಿರುವುದು ಮಹಿಳೆಯರಿಗೆ ಎಂಬ ಅಂಶವನ್ನು ಇವರು ಒಪ್ಪುತ್ತಾರೆ. ಅವರಲ್ಲಿ ಹೆಚ್ಚು ಮಂದಿ ಈಗ ಕಟ್ಟಡ ನಿರ್ಮಾಣದಲ್ಲಿ ಕೂಲಿಗಳಾಗಿ ಕೆಲಸ ಮಾಡುತ್ತಾರೆ. ಕೈಗಾರಿಕೆಗಳು ಬಂದ್ ಆಗಿದ್ದು ಭೂ ಮಾಫಿಯಾಗೆ ಕೇವಲ ಒಂದು ನೆಪ, ಅದು ಮುಂಬೈಯಲ್ಲಂತೂ ಅಪ್ಪಟ ನಿಜ ಎಂದು ಅವರು ಹೇಳುತ್ತಾರೆ.

ಹೆಚ್ಚು ಹೆಚ್ಚು ಮಹಿಳೆಯರು, ಕೌಶಲ್ಯವಿರಲಿ-ಅರೆ ಕೌಶಲ್ಯವೇ ಇರಲಿ, ಈ ಕೌಶಲ್ಯರಹಿತ ದೇಹಕ್ಕೆ ದುಡಿಯಲು ಬರುತ್ತಾರೆ. ಚೂರು ಪಾರು ಗಳಿಸುತ್ತಾರೆ. ಪ್ರಾವಿಡೆಂಟ್ ಫಂಡ್ ಇಲ್ಲ ; ಗ್ರಾಚುಯಿಟಿಯೂ ಇಲ್ಲ ಮೆಡಿಕಲ್ ಇನ್‌ಷ್ಯೂರೆನ್ಸ್ ಕೂಡ ಇಲ್ಲ.

ಜಾಗತೀಕರಣದ ಪರಿಣಾಮವಾಗಿ ಉದ್ಯೋಗಾವಕಾಶಗಳು ಕಡಿಮೆಯಾಗುತ್ತಿವೆ ; ಇದರಲ್ಲಿ ಹೆಚ್ಚು ಹಾನಿಯಾಗಿರುವುದು ಮಹಿಳೆಯರಿಗೆ ಎಂಬತ್ತ ಅರ್ಥಶಾಸ್ತ್ರಜ್ಞ ಜಯಂತಿ ಘೋಷ್ ಗಮನ ಸೆಳೆಯುತ್ತಾರೆ. ''ಇದರಲ್ಲಿ ಎರಡು ಪ್ರಕಾರದ ಮಹಿಳೆಯರಿಗೆ ಹೆಚ್ಚಿನ ಹಾನಿಯಾಗಿದೆ. ಒಂದು - ಮೂವತ್ತು ವರ್ಷ ದಾಟಿದವರು, ಎರಡು - ಕಡಿಮೆ ಶಿಕ್ಷಣ ಹೊಂದಿದವರು.'' ''ಜಾಗತೀಕರಣದ ಪರಿಣಾಮ ಇನ್ನೂ ಸಂಪೂರ್ಣವಾಗಿ ಆಗಿಲ್ಲವಾದ್ದರಿಂದ, ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಮಂದಿ ಕೆಲಸ ಕಳೆದುಕೊಳ್ಳುವವರಿದ್ದಾರೆ; ಇನ್ನೂ ಹೆಚ್ಚಿನ ಶೋಚನೀಯ ಹಾಗೂ ಅಪಾಯಕಾರಿ ಪರಿಸ್ಥಿತಿಗಳಲ್ಲಿ ಕೆಲಸ ಮಾಡಬೇಕಾಗುತ್ತದೆ'' ಎಂದು ಅವರು ಹೇಳುತ್ತಾರೆ.

ಠಾಣೆ-ಬೇಲಾಪುರ್ ರಸ್ತೆಯಲ್ಲಿನ ಅನೇಕ ಕಾರ್ಖಾನೆಗಳು ಮುಚ್ಚಲ್ಪಟ್ಟಿವೆ. ವೋಲ್ಟಾಸ್ ಸ್ವಿಚ್‌ಗೇರ್ ಕಾರ್ಖಾನೆಯ ಆಡಳಿತ ಘಟಕದಲ್ಲಿ ಅನೇಕ ಮಹಿಳೆಯರಿದ್ದರು. ಆದರೆ ಕಳೆದ ಆಗಸ್ಟ್ 2003ರಲ್ಲಿ ಕಾರ್ಖಾನೆಯನ್ನು ಮುಚ್ಚಲಾಯಿತು. 280 ಜನ ಕೆಲಸ ಕಳೆದುಕೊಂಡರು.

''ನಮ್ಮದು ಲಾಭಗಳಿಸುತ್ತಿದ್ದ ಘಟಕವೇ ಆಗಿತ್ತು'' ಎಂದು ಇಲ್ಲಿ ಸಹಾಯಕಿಯಾಗಿದ್ದ ಮಾಲತಿ ಬೇಂದ್ರೆ ಹೇಳುತ್ತಾರೆ. ಎರಡು ಮಕ್ಕಳ ತಾಯಿಯಾದ ಈಕೆ ಬೇರೆ ಕೆಲಸ ಹುಡುಕುತ್ತಿದ್ದಾರೆ. ಇನ್ನೂ ಸಿಕ್ಕಿಲ್ಲ ''ರಿಸೆಪ್ಷನಿಸ್ಟ್ ಕೆಲಸದ ಆಫರ್ ಬಂದಿತ್ತು. ತಿಂಗಳಿಗೆ 2000/-ರೂ. ಕೊಡುತ್ತೇವೆ ಅಂದರು. ಈ ಹಿಂದೆ ನಾನು ತಿಂಗಳಿಗೆ 8000/- ರೂ. ಗಳಿಸುತ್ತಿದ್ದೆ. ಈ ಮಧ್ಯೆ ನಾವೆಲ್ಲರೂ ಕಾರ್ಖಾನೆ ಮುಚ್ಚಿದ್ದರ ವಿರುದ್ಧ ಕೈಗಾರಿಕಾ ಕೋರ್ಟಿಗೆ ಅಪೀಲು ಹಾಕಿದ್ದೆವು. ಎರಡು ಮಧ್ಯಂತರ ಆದೇಶ ನಮ್ಮ ಪರವಾಗಿಯೇ ಬಂದಿದ್ದವು. ಆದರೆ ಈಗಾಗಲೇ ಆ ಜಾಗ ಮಾರಾಟವಾಗಿರುವುದರಿಂದ ಆ ಘಟಕವನ್ನು ಮತ್ತೆ ಆರಂಭಿಸುವ ಸಾಧ್ಯತೆಯೇ ಇಲ್ಲ'' ಎನ್ನುತ್ತಾರೆ. ಆಕೆ.

ಬಟ್ಟೆ ಬರೆಗಳ ಪಟ್ಟಣ ಎನಿಸಿಕೊಂಡ ಗುಜರಾತಿನ ಸೂರತ್‌ನಲ್ಲಿಯೂ ಪರಿಸ್ಥಿತಿ ಏನೂ ಭಿನ್ನವಾಗಿಲ್ಲ. ಕಳೆದ ಐದು ವರ್ಷಗಳಿಂದ ಈಚೆಗಂತೂ ಎಂದೂ ಇದ್ದಿರದ ಏಳು ಬೀಳುಗಳನ್ನು ಇಲ್ಲಿನ ಜವಳಿ ಉದ್ಯಮ ಕಂಡಿದೆ. ವಿದ್ಯುತ್ ಹಾಗೂ ತೆರಿಗೆ ದರಗಳು ಅತ್ಯಧಿಕ. ಆದರೆ ನೆರೆಯ ಚೀನಾದಲ್ಲಿ ಕಚ್ಚಾ ಸಾಮಗ್ರಿಗಳು ಸೇರಿದಂತೆ ಎಲ್ಲವೂ ಅಗ್ಗ. ಸಹಜವಾಗಿ,

ಈಗ ನಮ್ಮ ಮಾರುಕಟ್ಟೆ ಮೇಲೆ ಚೀನಾ ಹಾಗೂ ಕೊರಿಯಾದ ವಸ್ತುಗಳು ದಾಳಿ ಮಾಡುತ್ತಿವೆ. ''ನಮ್ಮ ಜವಳಿಗೆ ಮಾರಾಟವಿಲ್ಲ, ಮಾರಾಟವಿಲ್ಲ ಎಂದು ಮಿಲ್‌ಗಳು ಬಂದ್. ಅಂದರೆ ಸುಮಾರು 1 ಲಕ್ಷ ಜನ ನೌಕರಿ ಕಳೆದುಕೊಂಡರು. ಇವರ ಪೈಕಿ ಮಹಿಳೆಯರ ಸಂಖ್ಯೆ ಸುಮಾರು 25,000'' ಎನ್ನುತ್ತಾರೆ ಟ್ರೇಡ್ ಯೂನಿಯನ್ ಮುಖಂಡ ನೈಷಾದ್ ದೇಸಾಯಿ.

ಟೆಕ್ಸ್‌ಟೈಲ್ ಕಮಿಷನ್ ಆಫ್ ಇಂಡಿಯಾ ಪ್ರಕಟಿಸಿರುವ ವರದಿಯನ್ನು ದೇಸಾಯಿ ಉಲ್ಲೇಖಿಸುತ್ತಾರೆ - ''ಜವಳಿ ಉದ್ಯಮದಲ್ಲಿ 35 ಮಿಲಿಯನ್ ಕಾರ್ಮಿಕರಿದ್ದಾರೆ ಎಂದು ವರದಿ ತಿಳಿಸುತ್ತದೆ. ಇಲ್ಲಿ ಮಹಿಳೆಯರು ಹೆಚ್ಚಾಗಿ ದಾರ ತಿರುಗಿಸುವುದು, ಬಣ್ಣ ಹಾಕುವುದು ಹಾಗೂ ನೂಲುವುದು ಮುಂತಾದ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಾರೆ. ಪುರುಷರು ಕೆಲಸಕ್ಕಾಗಿ ಸುಲಭವಾಗಿ ಊರಿಂದೂರಿಗೆ ಹೋಗುತ್ತಾರೆ. ದುರಾದೃಷ್ಟದಿಂದ, ಮಹಿಳೆಯರಿಗೆ ಇದು ಅಷ್ಟು ಸುಲಭವಲ್ಲ. ನೇಯ್ಗೆಯ ಘಟಕಗಳು ಮುಚ್ಚಲ್ಪಟ್ಟಾಗ, ಅವರಿಗೆ ಅದೇ ಕೆಲಸಕ್ಕಾಗಿ ಪರ ಊರಿಗೆ ಹೋಗುವುದು ಅಸಾಧ್ಯವಾಗಿ, ತರಕಾರಿ ಮಾರುವುದು ಮುಂತಾದ ಪರ್ಯಾಯ ಕೆಲಸಗಳನ್ನು ಮಾಡುವ ಒತ್ತಾಯದ ಪರಿಸ್ಥಿತಿ ಎದುರಾಗುತ್ತದೆ.''

ಬಟ್ಟೆ ನೇಯುತ್ತಿದ್ದ ಗಂಗಾಬಾಯಿ ಈಗ ಸೆಕೆಂಡ್ ಹ್ಯಾಂಡ್ ಬಟ್ಟೆಗಳನ್ನು ಕೊಳ್ಳುವ-ಮಾರುವ ವ್ಯಾಪಾರ ನಡೆಸಿದ್ದಾಳೆ. ಸೂರತ್‌ನ ರೈಲು ನಿಲ್ದಾಣದ ಬಳಿಯ ಫುಟ್‌ಪಾತಿನಲ್ಲಿ ದಿನವೆಲ್ಲಾ ಅವಳ ವ್ಯಾಪಾರ ನಡೆಯುತ್ತದೆ. ''ಕಾಫಿ, ಟೀ, ತರಕಾರಿ ಮಾರುವುದಕ್ಕಿಂತ ಇದೇ ಮೇಲು'' ಎನ್ನುತ್ತಾಳೆ ಆಕೆ. ಆಕೆಗೆ 52 ವರ್ಷ. ಮೂರು ಮಂದಿ ಮೊಮ್ಮಕ್ಕಳ ಜವಾಬ್ದಾರಿ, 40^{0} ಸೆಲ್ಸಿಯಸ್ಸನ್ನು ದಾಟುವ ತಾಪಮಾನ. ಗಂಗಾಬಾಯಿಯ ಜೀವನ ಬಲು ಕಷ್ಟಕರ.

ಉತ್ತರ ಪ್ರದೇಶದ ಮಹಿಳೆಯರದ್ದೂ ಇದೇ ಕತೆ. ವಾರಣಾಸಿಯ ಸಿಲ್ಕ್ ಉದ್ಯಮ ತಲ್ಲಣಿಸುತ್ತಿದೆ. ಇಲ್ಲಿಯೂ ಸಹ ಚೀನಾದ ವಸ್ತ್ರಗಳು ಸ್ಥಳೀಯ ಉದ್ಯಮವನ್ನು ತಟಸ್ಥಗೊಳಿಸಿದೆ. ಇಲ್ಲಿಯೂ ಮಹಿಳೆಯರೇ ಮೊದಲು ಕೆಲಸ ಕಳೆದು ಕೊಂಡಿದ್ದಾರೆ.

ಇದು ವಸ್ತ್ರೋದ್ಯಮಕ್ಕೆ ಮಾತ್ರ ಸೀಮಿತವಾಗಿಲ್ಲ. ವಾರಣಾಸಿಯಲ್ಲಿ ಶೃಂಗಾರ ಸಾಧನಗಳು ಹಾಗೂ ಆಟಿಕೆಗಳ ಉದ್ಯಮಕ್ಕೂ ಹೊಡೆತ ಬಿದ್ದಿದೆ. ಬಿಂದಿ, ಸಿಂಧೂರ ಹಾಗೂ ಬಳೆಗಳನ್ನು ಇಟ್ಟುಕೊಳ್ಳಲು ಇಲ್ಲಿ ಸುಂದರವಾದ ಮರದ ಪುಟ್ಟ ಪೆಟ್ಟಿಗೆಗಳನ್ನು ತಯಾರಿಸುತ್ತಾರೆ. ಆದರೆ ಈಗ ಅಂತರಾಷ್ಟ್ರೀಯ ಶೃಂಗಾರ ಸಾಧನಗಳು ಹಾಗೂ ಪ್ಲಾಸ್ಟಿಕ್ ಆಟಿಕೆಗಳ ಸುರಿಮಳೆಯಲ್ಲಿ ಮರದ ಆಟಿಕೆಗಳ ಹಾಗೂ ಕೆತ್ತನೆಯ ಉದ್ಯಮಕ್ಕೂ ಕಲ್ಲು ಬಿದ್ದಿದೆ. ನಗರದ ಅತಿ ದೊಡ್ಡ ಸಗಟು ವರ್ತಕ ಜಗತ್ ನಾರಾಯಣ್ ಹೇಳುತ್ತಾರೆ - ''ಶತಮಾನಗಳಿಂದ ಪೋಷಿಸಿಕೊಂಡು ಬಂದಂತಹ ಕೆತ್ತನೆಯ ಕೌಶಲ್ಯಗಳು ನಮ್ಮ ಕಣ್ಣೆದುರಿಗೇ ನಿರ್ನಾಮವಾಗುತ್ತಿವೆ. ಸಮಸ್ಯೆಯ ಪರಿಹಾರಕ್ಕೆ ಸರ್ಕಾರ ಏನೇನೂ ಮಾಡುತ್ತಿಲ್ಲ.'' ಜಗತ್ ನಾರಾಯಣ್ 300 ಕೆತ್ತನೆಕಾರರಿಗೆ ಕೆಲಸ ಒದಗಿಸುತ್ತಿದ್ದರು.

ಗೀತಾ ಮೌರ್ಯ ವಾರಣಾಸಿಯ ಹೊರವಲಯದಲ್ಲಿ ನೆಲಸಿದ್ದಾಳೆ. ಆಕೆಯ ವೃತ್ತಿ ಮರದ ಆಟಿಕೆಗಳಿಗೆ ಬಣ್ಣ ಹಚ್ಚುವುದು. ಈ ಕೆಲಸದಲ್ಲಿ ಅವಳಿಗೆ ಚಾಕೀದಾರನಾಗಿರುವ ಗಂಡನಿಂದಲೂ ಇಬ್ಬರು ಮಕ್ಕಳಿಂದಲೂ ಸಹಾಯ ಸಿಗುತ್ತದೆ. ಗಂಡ-ಹೆಂಡತಿ ಇಬ್ಬರೂ ದಿನಕ್ಕೆ 12 ತಾಸು ಸತತವಾಗಿ ದುಡಿಯುತ್ತಾರೆ. ''ನಿಗದಿತ ಸಮಯದಲ್ಲಿ ಮಾಡದಿದ್ದರೆ, ಕೆಲಸ ಬೇರೆಯವರಿಗೆ ಕೊಡಲಾಗುತ್ತದೆ. ಈ ಆಸುಪಾಸಿನಲ್ಲಿ 300 ಜನ ಕುಶಲಕರ್ಮಿಗಳು ಕೆಲಸಕ್ಕಾಗಿ 'ಬೇಟೆ'ಯಾಡು ತ್ತಿದ್ದಾರೆ'' ಎನ್ನುತ್ತಾಳೆ ಗೀತಾ.

ಮಹಿಳಾ ಕಾರ್ಮಿಕರ ಸಮಸ್ಯೆಯ ಬಗ್ಗೆ ಸರ್ಕಾರ ಕುರುಡನಂತೆ ಕುಳಿತಿದೆ. ಕರಕುಶಲ ವಸ್ತುಗಳ ನಿಗಮದ ಅಭಿವೃದ್ಧಿ ಕಮಿಷನರ್ ಟಿನೂ ಜೋಷಿ ಹೇಳುತ್ತಾರೆ - ''ಜಾಗತೀಕರಣದ ಪ್ರಕ್ರಿಯೆಯನ್ನು ತಡೆಯಲು ನಾವೇನೂ ಮಾಡಲಾರೆವು. ಕುಶಲ ಕರ್ಮಿಗಳು ತಮ್ಮ ವಸ್ತುಗಳನ್ನು ಮಾರಾಟ ಮಾಡುವ ಕೌಶಲ್ಯ ಗಳಿಸಲು ಅವರಿಗಾಗಿ ವಿಶೇಷ ಶಿಬಿರಗಳನ್ನು ಏರ್ಪಡಿಸಲು ಪ್ರಯತ್ನಿಸುತ್ತಿದ್ದೇವೆ. ಇಲ್ಲಿ ಮುಖ್ಯ ಸಮಸ್ಯೆ ಏನೆಂದರೆ ಅವರು ತಮ್ಮ ವಸ್ತುವಿನ ಗುಣಮಟ್ಟಕ್ಕೆ ಅಷ್ಟಾಗಿ ಗಮನ ಕೊಡುತ್ತಿಲ್ಲ. 'ಫಿನಿಷಿಂಗ್' ಚೆನ್ನಾಗಿರುವುದಿಲ್ಲ. ಜಾಗತಿಕ ಪೈಪೋಟಿಗೆ ನಿಲ್ಲಬೇಕಾದರೆ ತಮ್ಮ ಕೌಶಲ್ಯ ನೈಪುಣ್ಯತೆಯನ್ನು ಹೆಚ್ಚಿಸಿಕೊಳ್ಳಬೇಕು.

ಸಾವಿರಾರು ನಿರುದ್ಯೋಗಿ ಮಹಿಳೆಯರಿಗೆ ಜೋಷಿಯವರ ಈ ಮಾತುಗಳು ಯಾವ ಭರವಸೆಯನ್ನು ನೀಡವು. ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆಯ ಅಂಕಿಅಂಶಗಳ ಪ್ರಕಾರ ಅಂತಿಮವಾಗಿ ಸ್ಪಷ್ಟವಾಗುವುದೇನೆಂದರೆ ಕೆಲಸದಿಂದ ನೌಕರರನ್ನು ತೆಗೆಯುವುದಾದರೆ, ಮೊದಲು ಮಹಿಳೆಯರನ್ನೇ ತೆಗೆಯುತ್ತಾರೆ. ಇದರ ಪರಿಣಾಮಗಳನ್ನು ಮಹಿಳೆಯರೇ ಅನುಭವಿಸಿಕೊಂಡು ಹೋಗುತ್ತಾರೆ.

ನಿರುದ್ಯೋಗಿಗಳ ಪಾಲಿಗೆ ಅಂಕಿ ಅಂಶ - ಅಧ್ಯಯನ ಎಲ್ಲವೂ ಅರ್ಥವಿಲ್ಲದ್ದು. ಐಟಿಸಿಯ ಅಧ್ಯಕ್ಷರಾದ ಎಂ.ಕೆ. ಪಾಂಡೆ ಮಹಿಳೆಯರು ನೌಕರಿ ಕಳೆದುಕೊಳ್ಳುತ್ತಿದ್ದಾರೆ. ಅವರಿಗೆ ಯಾವ ಭದ್ರತಾ ಕ್ರಮವನ್ನು ಒದಗಿಸಿಲ್ಲ. ಸರ್ಕಾರ ಇಲ್ಲಿ ಮಧ್ಯ ಪ್ರವೇಶಿಸಿ, ಮಹಿಳಾ ಕಾರ್ಮಿಕರ ಅವಶ್ಯಕತೆಗಳಿಗೆ ವಿಶೇಷ ಗಮನ ಕೊಡುವುದು ಅಗತ್ಯ'' ಎನ್ನುತ್ತಾರೆ.

ಅನುವಾದ : ಹೆಚ್.ಎಸ್. ಗೀತಾ

ಮೂಲ : ವಿಮೆನ್ಸ್ ಫೀಚರ್ ಸರ್ವೀಸ್

ನೀರಾವರಿ ಜಲ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರ

-ಕೆ.ಸಿ. ವಿಜಯಕುಮಾರಿ

ಭಾರತದ ಜನಸಂಖ್ಯೆಯಲ್ಲಿನ ಅರ್ಧದಷ್ಟು ಸಂಖ್ಯೆ ಮಹಿಳೆಯರದ್ದಾಗಿದೆ. ಮನೆಗಳಲ್ಲಿ ಕುಡಿಯುವುದಕ್ಕಾಗಿ, ನೈರ್ಮಲ್ಯೀಕರಣಕ್ಕಾಗಿ ಮುಂತಾದವುಗಳಿಗಾಗಿ ಬಳಸಲಾಗುವ ನೀರಿನ ಪ್ರಮುಖ ನಿರ್ವಹಣಕಾರರು ಈ ಮಹಿಳೆಯರು. ಹಾಗೆಯೇ ವ್ಯವಸಾಯಕ್ಕಾಗಿ ಬಳಸಲಾಗುವ ನೀರಾವರಿಯಲ್ಲೂ ಕೂಡ ಇವರ ಪಾತ್ರ ಅಷ್ಟೇ ಪ್ರಮುಖವಾದುದ್ದಾಗಿದೆ. ಏಕೆಂದರೆ ಹೆಚ್ಚಿನ ಗ್ರಾಮೀಣ ಮಹಿಳೆಯರು ವ್ಯವಸಾಯದ ಕೆಲಸ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಾರೆ.

ಮಹಿಳೆಯರ ಪಾತ್ರ

ನೀರಾವರಿ ಮತ್ತು ವ್ಯವಸಾಯ ಕ್ಷೇತ್ರದಲ್ಲಿ ಗ್ರಾಮೀಣ ಮಹಿಳೆಯರ ಪಾತ್ರ ಎಷ್ಟು ಪ್ರಮುಖವಾದುದೆಂದರೆ, ಮಹಿಳೆಯರ ವಿನಾ ಈ ಕ್ಷೇತ್ರಗಳನ್ನು ಊಹಿಸಲು ಸಾಧ್ಯವಿಲ್ಲ. ಪ್ರಸ್ತುತ, ಮಹಿಳೆಯರಲ್ಲಿ ಕೂಡ ಅಡಗಿರುವ ಶಕ್ತಿ ಸಾಮರ್ಥ್ಯಗಳನ್ನು ಬಹಳ ಚೆನ್ನಾಗಿ ಗುರುತಿಸಲಾಗಿದ್ದು, ಬಹಳಷ್ಟು ಕ್ಷೇತ್ರಗಳಲ್ಲಿ ಅವರು ತಮ್ಮ ಸಾಮರ್ಥ್ಯವನ್ನು ಧಾರೆ ಎರೆಯಬಹುದಾಗಿದೆ. ನೀರಿನ ಬೇಡಿಕೆಯ ಪ್ರಮಾಣ ಹೆಚ್ಚುತ್ತಿರುವುದರಿಂದ, ವ್ಯವಸಾಯೋತ್ಪನ್ನಗಳನ್ನು ಹೆಚ್ಚಿಸುವ ಅಗತ್ಯವಿರುವುದರಿಂದ, ವಿವಿಧ ಉದ್ದೇಶಗಳಿಗಾಗಿ ನೀರನ್ನು ಸಮರ್ಥವಾಗಿ ಬಳಸಬೇಕಾಗುವುದರಿಂದ, ಗೃಹ ಉದ್ದೇಶ ಹಾಗೂ ನೀರಾವರಿ ಉದ್ದೇಶಗಳಿಗೆ ನೀರನ್ನು ಬಳಸುವ ಬಗ್ಗೆ ಒಂದು ಯೋಜನೆಯನ್ನು ರೂಪಿಸುವ, ನೀರನ್ನು ನಿರ್ವಹಣೆ ಮಾಡುವ ಬಗ್ಗೆ ತಿಳಿದುಕೊಳ್ಳುವುದು ಅತ್ಯಾವಶ್ಯಕ. ಈ ನಿಟ್ಟಿನಲ್ಲಿ ಮಹಿಳೆಯರಲ್ಲಿ ನೀರಾವರಿಯಲ್ಲಿ ಜಲ ನಿರ್ವಹಣೆ ಮಾಡುವ ಬಗ್ಗೆ ಜಾಗೃತಿ ಮೂಡಿಸಿ ಹೆಚ್ಚು ಸಹಕಾರ ನೀಡುವಂತೆ ಅನುವು ಮಾಡಿಕೊಡಬೇಕು.

ಜಲ ಸಂಪನ್ಮೂಲಗಳ ನಿರ್ವಹಣೆಯ ಜವಾಬ್ದಾರಿಯನ್ನು ಸರ್ಕಾರದಿಂದ ಕಮ್ಯೂನಿಟಿಗಳಿಗೆ ಅಥವಾ ಸ್ಥಳೀಯ ನೀರು ಬಳಕೆದಾರರ ತಂಡದವರಿಗೆ ವಹಿಸಿಕೊಡಬೇಕೆನ್ನುವ ನಿರ್ಧಾರದಿಂದ ಸಮಾನ ಹಂಚಿಕೆ ಮತ್ತು ಪರಿಣಾಮಕಾರಿ ಸಂಪನ್ಮೂಲ ನಿರ್ವಹಣೆಗೆ ಅರ್ಥ ಬರುತ್ತದೆ. ನೀರಾವರಿ ಉದ್ದೇಶಗಳಿಗೆ ನೀರು ನಿರ್ವಹಣೆಯ ಯೋಜನೆಯನ್ನು ರೂಪಿಸುವುದು ಹಾಗೂ ಅದನ್ನು ಕಾರ್ಯಗತಗೊಳಿಸುವ ಕಾರ್ಯವನ್ನು ಹೊತ್ತಿರುವ ನೀರು ಬಳಕೆದಾರರ ಸಹಕಾರಿ ಸಂಘಗಳು / ನೀರು ಬಳಕೆದಾರರ ಸಂಸ್ಥೆಗಳಲ್ಲಿ ಸ್ತ್ರೀಯರ ಸಹಭಾಗಿತ್ವ ಅತ್ಯಂತ ವಿರಳವಾಗಿದೆ ಎಂಬುದು ಕಂಡುಬಂದಿದೆ. ಇದರ ಮುಖ್ಯ ಕಾರಣ ಸಂಘ ಸಂಸ್ಥೆಗಳಲ್ಲಿ ಮಹಿಳೆಯರನ್ನು ಹೊರತು ಪಡಿಸಿ ಸದಸ್ಯತ್ವ ನೀಡುತ್ತಿರುವುದು. ಸದಸ್ಯತ್ವದಲ್ಲಿ ಮಹಿಳೆಯರಿಗೆ ಪ್ರಾಧಾನ್ಯತೆ ನೀಡಿ ಸದಸ್ಯತ್ವವನ್ನು ನೀಡಿದಲ್ಲಿ ಮಹಿಳೆಯರ ಸ್ಥಿತಿಗತಿಗಳನ್ನು ಬಲಪಡಿಸಬಹುದು. ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿದ ಹಾಗೂ ನಿರ್ವಹಣೆಯಲ್ಲಿ ಅವರ ಸಲಹ ಸೂಚನೆಗಳನ್ನು ಪರಿಗಣಿಸಿದ ಸಂಘ ಸಂಸ್ಥೆಯ ಕಾರ್ಯಗಳು ಪರಿಣಾಮಕಾರಿಯಾಗಿರುವುದು ಕಂಡುಬಂದಿದೆ.

ನೀರಿನ ಲಭ್ಯತೆಯ ಕುರಿತಂತೆ ನ್ಯಾಯಯುತ ಹಕ್ಕುಗಳನ್ನು ಹೊಂದಿದ ವ್ಯಕ್ತಿಗಳು ಹಕ್ಕುಗಳನ್ನು ಹೊಂದದೆ ಇರುವ ವ್ಯಕ್ತಿಗಳಿಗಿಂತ ಹೆಚ್ಚು ಪ್ರಬಲರಾಗಿದ್ದಾರೆ. ಈ ಕಾರಣಕ್ಕಾಗಿ ಮಹಿಳೆಯರು, ಭೂ ಮತ್ತು ಜಲದ ಕುರಿತಂತೆ ನ್ಯಾಯಯುತ ಹಕ್ಕುಗಳನ್ನು ಹೊಂದುವ ಅಗತ್ಯತೆ ಬಗ್ಗೆ ಸುದೀರ್ಘ ವಿಚಾರ ಸಂಕಿರಣವು ನಡೆಯಬೇಕಾಗಿದೆ.

ಸಾಮಾನ್ಯ ಜಲ ನಿರ್ವಹಣೆ, ನೀರಾವರಿ ಹಾಗೂ ಗೃಹೋದ್ದೇಶಗಳಿಗಾಗಿ ನೀರನ್ನು ಬಳಸುವ ಕಾರ್ಯದಲ್ಲಿ ಮಹಿಳೆಯರ ಪಾತ್ರ, ಸಾಮರ್ಥ್ಯವನ್ನು ಪರಿಗಣಿಸಿ ಅವರಿಗೆ ತಕ್ಕ ನಿರ್ದೇಶನವನ್ನು ನೀಡುವುದು ಅತ್ಯಂತ ಸೂಕ್ತ. ಆದ್ದರಿಂದ ಈ ಕ್ಷೇತ್ರದಲ್ಲಿ ಶಿಕ್ಷಣದ ಮೂಲಕ ಅರಿವನ್ನು ಮೂಡಿಸುತ್ತಾ ಮಹಿಳೆಯರ ಸಾಮರ್ಥ್ಯವನ್ನು ವೃದ್ಧಿಗೊಳಿಸುವುದು ಅತ್ಯಾವಶ್ಯಕ. ಜಲ ವಿಚಾರಗಳಲ್ಲಿ ಮಹಿಳೆಯರ ಹೆಚ್ಚಿನ ಪಾಲ್ಗೊಳ್ಳುವಿಕೆಯಿಂದ ಜಲ ಬಳಕೆ ಮತ್ತು ನೈರ್ಮಲ್ಯೀಕರಣಗಳ ಕುರಿತ ಜಾಗೃತಿ ಕಾರ್ಯಕ್ರಮಗಳು ಹೆಚ್ಚು ಪರಿಣಾಮಕಾರಿಯಾಗಿರುವುದು. ಅವರ ಯೋಜಿತ ಮತ್ತು ಸಾಂಘಿಕ ಭಾಗವಹಿಸುವಿಕೆಯು ಪರಿಣಾಮಕಾರಿ ಸಮರ್ಥ ಜಲ ಬಳಕೆಗೆ ಕೊಡುಗೆಯಾಗುವುದು. ಬಹಳಷ್ಟು ಮಹಿಳೆಯರು ಜಲ ಕ್ಷೇತ್ರಗಳಾದ ವ್ಯವಸಾಯ, ಗೃಹ ಮತ್ತು ಇನ್ನಿತರ ಉದ್ದೇಶಗಳಲ್ಲಿ ಒಳಗೊಂಡಿದ್ದರೂ, ಇನ್ನೂ ಸಾಂಪ್ರದಾಯಿಕ ವಿಧಾನಗಳನ್ನೇ ಅನುಸರಿಸುತ್ತಿದ್ದಾರೆ. ಆದುದರಿಂದ ಈ ಮಹಿಳೆಯರಿಗೆ ತರಬೇತಿಯು ಅತ್ಯಾವಶ್ಯಕ.

ರೈತ ಮಹಿಳೆಯರಿಗಾಗಿ ತರಬೇತಿ

ಅಂತರರಾಷ್ಟ್ರೀಯ, ರಾಷ್ಟ್ರೀಯ, ರಾಜ್ಯ ಹಾಗೂ ಸ್ಥಳೀಯ ಮಟ್ಟಗಳಲ್ಲಿ ನಡೆದ ವಿಚಾರಗೋಷ್ಠಿಗಳಲ್ಲಿ ತಿಳಿದು ಬಂದ ಅಂಶವೇನೆಂದರೆ ನೀರಾವರಿ ಹಾಗೂ ಇನ್ನಿತರೇ ಸಂಬಂಧಿತ ಕ್ಷೇತ್ರಗಳಲ್ಲಿ ಜಲ ನಿರ್ವಹಣೆ ಕೈಗೊಳ್ಳುವ ರೈತ ಮಹಿಳೆಯರಿಗೆ ತರಬೇತಿಯು ಅತ್ಯಾವಶ್ಯಕವಾಗಿದೆ ಎಂಬುದು.

1966-67ರಲ್ಲಿ ಕೇಂದ್ರವು ರೈತರಿಗಾಗಿ ಪ್ರಾಯೋಜಿಸಿದ ಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮಗಳಲ್ಲಿ ರೈತ ಮಹಿಳೆಯರಿಗಾಗಿ ಸಾಂಸ್ಥಿಕ ಆಧಾರದ ಮೇಲೆ ತರಬೇತಿಯನ್ನು ನೀಡಲು ಪ್ರಾರಂಭಿಸಲಾಯಿತು. ಕಾರ್ಯಕ್ರಮವನ್ನು

ಪ್ರಾಯೋಜಿಸಿದವರ ಅಭಿಪ್ರಾಯದ ಪ್ರಕಾರ ಸದರಿ ಕಾರ್ಯಕ್ರಮವನ್ನು ಪುರಷ ರೈತರನ್ನು ದೃಷ್ಟಿಯಲ್ಲಿಟ್ಟುಕೊಂಡು ಅಭಿವೃದ್ಧಿಪಡಿಸಲಾದ ಕಾರಣ ರೈತ ಮಹಿಳೆಯರು ಈ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಮಾಡುವುದು ಸಾಧ್ಯವಾಗಲಿಲ್ಲ. ಅಲ್ಲದೇ ಮಹಿಳೆಯರು ಸಂಪ್ರದಾಯವನ್ನು ಹೆಚ್ಚು ಅವಲಂಬಿಸಿರುವ ಕಾರಣ, ಪುರುಷ ರೈತರ ಜೊತೆ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಹಿಂಜರಿದರು. ಹಳ್ಳಿಗಳಿಂದ ದೂರದಲ್ಲಿ ಆಯೋಜಿಸಲಾದ ತರಬೇತಿ ಶಿಬಿರಗಳಲ್ಲಿ ಅವರು ಭಾಗವಹಿಸಲು ಹಳ್ಳಿ ಸಂಪ್ರದಾಯಗಳು ಅಡ್ಡಿಪಡಿಸಿದವು. ಈ ಕಾರಣಗಳಿಂದಾಗಿ ಮಹಿಳೆಯರಿಗಾಗಿಯೇ ಪ್ರತ್ಯೇಕ ತರಬೇತಿಗಳನ್ನು ಆಯೋಜಿಸುವುದು ಸೂಕ್ತ ಎಂದು ಅಭಿಪ್ರಾಯಪಟ್ಟಿದ್ದಾರೆ. ಮಹಿಳಾ ತರಬೇತಿ ಶಿಕ್ಷಣ ಮಾಹಿತಿಗಳಿಂದ ತಿಳಿದು ಬರುವುದೇನೆಂದರೆ, ಶಿಕ್ಷಣದಲ್ಲಿ ಹೊಲಿಗೆ, ನಿಟ್ಟಿಂಗ್, ಕೈಮಗ್ಗ, ಕೋಳಿ ಸಾಕಣೆ, ಹೈನುಗಾರಿಕೆ ಮುಂತಾದವುಗಳಿಗೆ ಗರಿಷ್ಠ ಪ್ರಾಶಸ್ತ್ಯ ನೀಡಿ, ನೀರು ನಿರ್ವಹಣೆ / ನೀರಾವರಿ ವ್ಯವಸಾಯಗಳಿಗೆ ಕನಿಷ್ಠ ಪ್ರಾಶಸ್ತ್ಯನೀಡಲಾಗಿದೆ.

ಮಹಾರಾಷ್ಟ್ರದಲ್ಲಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಅಥವಾ ವಾಲ್ಮಿ, ಔರಂಗಬಾದ್ ಇವರು ಆಯೋಜಿಸಿದ್ದ ರೈತರ ತರಬೇತಿ ಶಿಬಿರಗಳಲ್ಲಿ ಮಹಿಳೆಯರ ಸಂಖ್ಯೆ ಕ್ಷೀಣವಾಗಿದ್ದುದ್ದು ಕಂಡುಬಂದಿದೆ. 1994ರಲ್ಲಿ ಮಹಾರಾಷ್ಟ್ರದಲ್ಲಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಸತಾರ ಇವರು ಮಹಿಳೆಯರಿಗಾಗಿಯೇ ಆಯೋಜಿಸಿದ್ದ ಶಿಬಿರದಲ್ಲಿ ಮಹಿಳೆಯರ ಪ್ರತಿಕ್ರಿಯೆ ಉತ್ತಮವಾಗಿತ್ತು.

ಕೃಷಿ ಇಲಾಖೆಯ ಮೂಲಕ ಮಹಿಳೆಯರಿಗಾಗಿ ತರಬೇತಿಗಳನ್ನು ಆಯೋಜಿಸಿದರೆ ಕೃಷಿಯ ಬಗ್ಗೆ ಹೆಚ್ಚಿನ ತಿಳುವಳಿಕೆಯನ್ನು ನೀಡುವಲ್ಲಿ ಸಫಲರಾಗಬಹುದು.

ಕೃಷಿ ಕ್ಷೇತ್ರದಲ್ಲಿ ಮಹಿಳೆಯರ ಸ್ಥಾನಮಾನ

ಸಾಮಾನ್ಯವಾಗಿ ಕೃಷಿ ಕ್ಷೇತ್ರದಲ್ಲಿ ಮಹಿಳೆಯರ ಪಾತ್ರವನ್ನು ಕುಬ್ಜವಾಗಿ ಅಂದಾಜು ಮಾಡಲಾಗುತ್ತಿದೆ. ಬಹು ಪ್ರಕಾರದ ಕೃಷಿ ಚಟುವಟಿಕೆಗಳಲ್ಲಿ, ಒಕ್ಕಲು ಮಹಿಳೆಯರು ತಮ್ಮ ಹೆಗಲು ಕೊಟ್ಟು ಅತೀ ಭಾರವನ್ನು ಹೊರಬೇಕಾಗುತ್ತದೆ. ವಾಸ್ತವಿಕವಾಗಿ ಕೃಷಿಕ್ಷೇತ್ರದಲ್ಲಿ ಮುಖ್ಯ ಪಾತ್ರವನ್ನು ವಹಿಸುವವರು ಈ ಮಹಿಳೆಯರೇ. ಕೊಯ್ಲು ಮಾಡುವುದು, ಕಳೆ ಕೀಳುವುದು ಮುಂತಾದ ಕೆಲಸ ಕಾರ್ಯವನ್ನು ಮುಖ್ಯವಾಗಿ ನಿರ್ವಹಿಸುವವರು ಈ ಮಹಿಳೆಯರೇ. ಈ ಕೆಲಸ ಕಾರ್ಯದ ಜೊತೆಗೇ, ಗೃಹ ಕಾರ್ಯವನ್ನು ನಿರ್ವಹಿಸಿ, ದನ ಕುರಿಗಳನ್ನು ನೋಡಿಕೊಂಡು ಹೊಲಗಳಲ್ಲಿ ಕೆಲಸ ಮಾಡುತ್ತಾರೆ. ಹೀಗಿರುವಾಗ ಕೃಷಿ ಕ್ಷೇತ್ರದಲ್ಲಿ ಮಹಿಳೆಯ ಸ್ಥಾನಮಾನ ಕಡಿಮೆ ದರ್ಜೆಯಲ್ಲಿರುವುದಕ್ಕೆ 2 ಕಾರಣಗಳಿವೆ. ಅವು ಯಾವುವೆಂದರೆ 1) ಆಸ್ತಿಯ ಒಡತನ ಮತ್ತು ಆಸ್ತಿಪಾಸ್ತಿಯ ನಿಯಂತ್ರಣ ಪುರುಷರ ಕೈಯಲ್ಲಿರುವುದರಿಂದ 2) ಕೃಷಿಯಲ್ಲಿನ ಮುಖ್ಯ ಚಟುವಟಿಕೆಗಳಾದ ಬಿತ್ತನೆ ಮತ್ತು ಉಳುಮೆ ಮುಂತಾದ ಕಾರ್ಯಗಳನ್ನು ಪುರುಷರೇ ನಿರ್ವಹಿಸುವುದರಿಂದ ಮತ್ತು ಈ ಕ್ಷೇತ್ರಗಳಲ್ಲಿಯೇ ತಾಂತ್ರಿಕ ಅಭಿವೃದ್ಧಿ ಕಾರ್ಯಗಳು ಸಾಗುತ್ತಿರುವ ಕಾರಣ, ಈ ತಾಂತ್ರಿಕ ಅಭಿವೃದ್ಧಿ ಚಟುವಟಿಕೆ ಕಾರ್ಯವನ್ನು ನಿರ್ವಹಿಸುವ ಕೆಲಸದಲ್ಲಿ ಮಹಿಳೆಯ ಪಾತ್ರ ಸಾಕಷ್ಟಿಲ್ಲ.

ನೀರಾವರಿ ನಿರ್ವಹಣಾ ಸಹ ಭಾಗಿತ್ವದಲ್ಲಿ ಮಹಿಳೆಯ ಪಾತ್ರ

ನಿರ್ವಹಣೆಯ ಕಾರ್ಯವನ್ನು ರೈತರುಗಳಿಗೆ ವರ್ಗಾಯಿಸುವಾಗ, ಮಹಿಳೆಯರಿಗೆ ನಿರ್ದಿಷ್ಟ ಮತ್ತು ವೈಶಿಷ್ಟ್ಯಪೂರ್ಣ ಪಾತ್ರವನ್ನು ನೀಡಿದಲ್ಲಿ ನೀರಾವರಿ ನಿರ್ವಹಣಾ ಸಹಭಾಗಿತ್ವವನ್ನು ಯಶಸ್ವಿಯಾಗಿಸಬಹುದು. ಕೃಷಿ ಚಟುವಟಿಕೆಗಳಲ್ಲಿರುವ ಒಡೆತನದ ವಿಷಯ ಮುಂತಾದ ವಿಷಯಗಳನ್ನು ಪರಿಗಣನೆಗೆ ತೆಗೆದುಕೊಳ್ಳದೇ ಮಹಿಳೆಯರನ್ನು ಪುರುಷರಿಗೆ ಸರಿಸಮಾನರಾಗಿ ನಡೆಸಿಕೊಳ್ಳಬೇಕು. ಹೀಗೆ ಮಾಡುವ ಒಂದು ಮಾರ್ಗವೆಂದರೆ, ಮಹಿಳಾ ಪ್ರತಿನಿಧಿಗಳನ್ನು ನೀರು ಬಳಕೆದಾರರ ಸಹಕಾರಿ ಸಂಘಗಳಲ್ಲಿ ಸೇರಿಸಿಕೊಳ್ಳಬೇಕು ಅಥವಾ ಮಹಿಳಾ ಮಂಡಳಿಗಳನ್ನು ರಚಿಸಿ, ನೀರು ಬಳಕೆದಾರರ ಸಹಕಾರಿ ಸಂಘಗಳ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡಿದಲ್ಲಿ, ಅವರ ಚಟುವಟಿಕೆ ಕ್ಷೇತ್ರದಲ್ಲಿ, ತಾಂತ್ರಿಕತೆಯನ್ನು ಉತ್ತಮಪಡಿಸುವಲ್ಲಿ ಸಹಾಯಕವಾಗುತ್ತದೆ. ಗಂಡು ಹೆಣ್ಣೆಂಬ ಭೇದಭಾವವನ್ನು ತೊಡೆದು ಹಾಕುವಲ್ಲಿ ಯಶಸ್ವಿಯಾಗಬೇಕಾದರೆ, ಪೂರ್ಣಪ್ರಮಾಣದ ತರಬೇತಿ ಮತ್ತು ಶಿಕ್ಷಣ ಕಾರ್ಯಕ್ರಮವನ್ನು ಅತ್ಯಾವಶ್ಯಕವಾಗಿ ಕೈಗೊಳ್ಳಬೇಕಾಗಿದೆ.

ಕುಡಿಯುವ ನೀರು ಸರಬರಾಜು ಮತ್ತು ನಿರ್ಮಲೀಕರಣ ಕೆಲಸದಲ್ಲಿ ಮಹಿಳೆಯ ಪಾತ್ರ

ಅಭಿವೃದ್ಧಿ ಹೊಂದುತ್ತಿರುವ ಹೆಚ್ಚಿನ ದೇಶಗಳಲ್ಲಿರುವಂತೆ, ಭಾರತದಲ್ಲೂ ಕೂಡ ನೀರನ್ನು ಸಂಗ್ರಹಿಸಿ ಗೃಹಕಾರ್ಯಗಳಲ್ಲಿ ಬಳಸುವುದರಲ್ಲಿ ಮಹಿಳೆಯೇ ಜವಾಬ್ದಾರಳಾಗಿರುತ್ತಾಳೆ. ಅನುಭವದಿಂದ ಮತ್ತು 'ಆಟಿಟ್ಯೂಡ್ಸ್ ಅಂಡ್ ಪ್ರಾಕ್ಟೀಸಸ್'ನ ಅಧ್ಯಯನದ ಪ್ರಕಾರ ಭಾರತದ ಗ್ರಾಮೀಣ ಪ್ರದೇಶದಲ್ಲಿ, ಮಹಿಳೆಯು ನೀರನ್ನು ಸಂಗ್ರಹಿಸುವ ಕಾರ್ಯದಲ್ಲಿ ದಿನವೊಂದಕ್ಕೆ ಒಂದರಿಂದ ನಾಲ್ಕು ತಾಸುಗಳನ್ನು ಕಳೆಯುತ್ತಾಳೆ. ಹೆಚ್ಚು ಕಡಿಮೆ ಕೃಷಿಯ ಅರ್ಧ ಕೆಲಸವನ್ನು ಮಹಿಳೆ ನಿರ್ವಹಿಸುತ್ತಾಳೆ ಮತ್ತು ಗ್ರಾಮೀಣ ಭಾರತದಲ್ಲಿ ಶೇ. 30ಕ್ಕಿಂತ ಹೆಚ್ಚು ಬಡಕುಟುಂಬಗಳಿಗೆ ಮಹಿಳೆಯೇ ಯಜಮಾನಿತಿಯಾಗಿರುತ್ತಾಳೆ. ಮಹಿಳೆಯ ಕಾರ್ಯಭಾರವು, ನೀರಾವರಿಗೆ ಅಥವಾ ಗೃಹಕೃತ್ಯಗಳಿಗೆ ಲಭ್ಯವಾಗುವ ನೀರಿನ ಮೇಲೆ ಅವಲಂಬಿತವಾಗಿದೆ. ಗೃಹಕಾರ್ಯಗಳಿಗೆ ನೀರಿನ ವ್ಯವಸ್ಥೆ

ಮಾಡುವುದಕ್ಕಾಗಿ ಮಹಿಳೆಯರು ಬೇಕು. ನೀರು, ಸಮೀಪದಲ್ಲಿ ದೊರೆಯದೇ ಇದ್ದ ಪಕ್ಷದಲ್ಲಿ ದೂರದಿಂದ ಹೊತ್ತು ತರುವುದಕ್ಕಾಗಿ ಮಹಿಳೆಯರು ಬೇಕು. ನಿರ್ಮಲೀಕರಣದ ಸೌಕರ್ಯಗಳ ಅಭಾವದಿಂದ ಉಂಟಾಗುವ ಸಮಸ್ಯೆಗಳನ್ನು ಎದುರಿಸಬೇಕಾದವರು ಮಹಿಳೆಯರು. ಆರು ಸದಸ್ಯರಿರುವ ಮನೆಗೆ ಅಥವಾ ಒಂದು ದಿನಕ್ಕೆ ಮನುಷ್ಯನೊಬ್ಬನಿಗೆ 32 ಲೀಟರ್ ನೀರಿನಂತೆ, 192 ಲೀಟರ್ ನೀರನ್ನು ಹೊತ್ತು ತರಲು ಅವರು ನೀರಿನ ಮೂಲದೆಡೆಗೆ ಸರಾಸರಿ 9 ಬಾರಿ ಓಡಾಡಬೇಕಾಗುತ್ತದೆ. ಮಹಿಳೆಯರ ಸಾಮೂಹಿಕ ಒಗ್ಗಟ್ಟು ಮತ್ತು ಐಕಮತ್ಯವೇ ಅವರ ಅಗಾಧ ಸಾಮರ್ಥ್ಯದ ಮೂಲವಾಗಿದೆ ಹಾಗೂ ಇದು ಅನುಕರಣೀಯ ಕೂಡ. ಆದ್ದರಿಂದ ಅವರನ್ನು ಉತ್ತೇಜನಗೊಳಿಸಿ ಜಲನಿರ್ವಹಣೆ ಕಾರ್ಯದಲ್ಲಿ ಭಾಗವಹಿಸಲು ಅನುವು ಮಾಡಿಕೊಡಬೇಕು. ಸ್ಥಳೀಯ ಮಹಿಳೆಯರಿಗೆ ಅವರ ಸುತ್ತಮುತ್ತ ಇರುವ ನೀರಿನ ಮೂಲಗಳ ಬಗ್ಗೆ ಉತ್ತಮ ತಿಳುವಳಿಕೆ ಇರುತ್ತದೆ. ಈ ತಿಳುವಳಿಕೆಯು ಅವರು ಸ್ಥಳೀಯರಾಗಿರುವ ಕಾರಣದಿಂದ ಬಂದಿರುವುದಿಲ್ಲ, ಅವರು ಎಷ್ಟು ವರ್ಷಕಾಲ ನಂಬಿಗಸ್ಥರಾಗಿ ವಾಸಿಸುತ್ತಿರುತ್ತಾರೆ ಎಂಬುದರ ಮೇಲೆ ಆಧಾರಗೊಂಡಿದೆ. ಅವರಿಗೆ, ಅವರ ಹಳ್ಳಿಯಲ್ಲಿ ಯಾರು ಯಾರು ವಾಸಿಸುತ್ತಿದ್ದಾರೆ ಮತ್ತು ಯಾವ ಜನಾಂಗದ ಅಭ್ಯಾಸಗಳು ಹೇಗೆ ಮತ್ತು ಅವರ ಇಷ್ಟಾನಿಷ್ಟಗಳು ಯಾವುವು, ಜನರು ಯಾವ ರೀತಿ ನೀರಿನ ಬಳಕೆ ಮಾಡುತ್ತಾರೆ ಮತ್ತು ಕಲ್ಮಶಗಳ ವಿತರಣೆ ಹೇಗೆ ಮಾಡುತ್ತಾರೆ ಎಂಬುದರ ಬಗ್ಗೆ ಅರಿವಿರುತ್ತದೆ. ಪೂರ್ವಕಾಲದಲ್ಲಿ ಈ ನಿರ್ಧಾರಕ ತಿಳುವನ್ನು ಅಲಕ್ಷ್ಯ ಮಾಡಲಾಯಿತು ಮತ್ತು ಈ ಕಾರಣದಿಂದಾಗಿ ಹಲವು ಬಾರಿ ಸರ್ಕಾರದಿಂದ ಅಭಿವೃದ್ಧಗೊಂಡ ನೀರಿನ ಮೂಲಗಳು ಮತ್ತು ಲೆಟ್ರಿನ್‌ಗಳು ನಿರುಪಯೋಗಗೊಂಡವು.

ಜಲ ಸಂಪನ್ಮೂಲ ಯೋಜನೆಗಳನ್ನು ಸರಿಯಾಗಿ ಯೋಜಿಸಿ ವಿನ್ಯಾಸ ರಚಿಸಿ, ಕುಡಿಯುವ ನೀರು ಸರಬರಾಜಿನ ಉದ್ದೇಶ ಮತ್ತು ಇನ್ನಿತರೇ ಉಪಯೋಗಗಳ ಉದ್ದೇಶಗಳನ್ನು ಇಟ್ಟುಕೊಂಡು ರೂಪಿಸುವುದರಿಂದ ಈ ಜಲಸಂಪನ್ಮೂಲ ಯೋಜನೆಗಳ ನಿರ್ಮಾಣವು ಗ್ರಾಮೀಣ ಮಹಿಳೆಯರ ಹಲವು ಸಮಸ್ಯೆಗಳನ್ನು ಕಡಿಮೆ ಮಾಡುತ್ತವೆ. ಈ ಕಾರ್ಯದಿಂದ, ಅವರ ಮನೆ ಬಾಗಿಲಿಗೆ ನೀರನ್ನು ತರುವಲ್ಲಿ ಯಶಸ್ವಿಯಾಗಿ, ಮಹಿಳೆಯರು ನೀರಿಗಾಗಿ ದೂರದೂರದವರೆಗೆ ಅಲೆದಾಡಬೇಕಾಗುವ ಪರಿಸ್ಥಿತಿಯಿಂದ ಮುಕ್ತಿಗೊಳಿಸಬಹುದು.

ಮಹಿಳೆಯರಿಗೆ ತಿಳುವಳಿಕೆ, ಮಾಹಿತಿ ಮತ್ತು ತರಬೇತಿ ಕಾರ್ಯಕ್ರಮಗಳು

ಇತ್ತೀಚೆಗೆ ಮಹಿಳೆಯರಿಗೆ ತಿಳುವಳಿಕೆ, ಮಾಹಿತಿ, ಮತ್ತು ತರಬೇತಿ ನೀಡುವ ವಿಚಾರದಲ್ಲಿ ಪ್ರಾಮುಖ್ಯತೆ ನೀಡಲಾಗುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆಯಡಿ, the community based convergent services programme ಮತ್ತು ಮಾಹಿತಿ, ಶಿಕ್ಷಣ ಮತ್ತು ಸಂಪರ್ಕ ವಿಭಾಗದ ಅಂಗಗಳು, ತಮ್ಮ ವಿವಿಧ ಸರ್ಕಾರಿ ಕಾರ್ಯಕ್ರಮಗಳಡಿ ಪ್ರಸ್ತುತ ಇರುವ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಮಹಿಳೆಯರು ತಮ್ಮ ಅಗತ್ಯಗಳನ್ನು ಹೊಂದುವಲ್ಲಿ, ಅವರಿಗೆ ಆದ್ಯತೆ ಸಿಗುವ ಹಾಗೆ ಮಾಡುವಲ್ಲಿ ಸಹಾಯಕವಾಗುತ್ತಿವೆ. ದ ಯುನೈಟೆಡ್ ನೇಷನ್ಸ್ ಚಿಲ್ಡ್ರನ್ಸ್ ಫಂಡ್ (UNICEF) ನವರು ಭಾರತ ಸರ್ಕಾರದೊಂದಿಗೆ ಬಹಳ ಹಿಂದಿನಿಂದಲೂ ದೇಶದ ಗ್ರಾಮೀಣ ಪ್ರದೇಶಗಳಿಗೆ ಸುರಕ್ಷಿತ ನೀರು ಒದಗಿಸುವ ಕಾರ್ಯದಲ್ಲಿ ನಿರತವಾಗಿದೆ. ಈಗ, ಯೂನಿಸೆಫ್ (UNICEF) ಆಧಾರಿತ ಯೋಜನೆಗಳಲ್ಲಿ, ಸ್ಥಳೀಯ ಮಹಿಳೆಯರು ಮತ್ತು ಗ್ರಾಮ ಜಲ ಮತ್ತು ನಿರ್ಮಲೀಕರಣ ಸಮಿತಿಗಳು ಹೊಸ ನೀರಿನ ಮೂಲಗಳನ್ನು ಗುರುತಿಸುವಲ್ಲಿ ಸಹಾಯಕರಾಗಿರುತ್ತಾರೆ. ನೀರಿನ ಮೂಲಗಳನ್ನು, ಯಾವ ಸ್ಥಳಗಳಲ್ಲಿ ಪ್ರತಿಷ್ಠಾಪಿಸಬೇಕು ಎಂಬುದನ್ನು ನಿರ್ಧರಿಸುವುದು ಮತ್ತು ಗ್ರಾಮೀಣ ಮಹಿಳೆಯರಿಗೆ ಹ್ಯಾಂಡ್ ಪಂಪ್ ಮೆಕ್ಯಾನಿಕ್‌ಗಳ ಬಗ್ಗೆ ತರಬೇತಿ ನೀಡುವುದು, ನೀರು ಸರಬರಾಜು ಮತ್ತು ಪರಿಸರ ನಿರ್ಮಲೀಕರಣ ಕಾರ್ಯಗಳು ಮೊಬಿಲೈನಿಂಗ್ ಕಮ್ಯುನಿಟಿಯ ಕಾರ್ಯಕ್ರಮದ ಪ್ರಥಮ ಹಂತವಾಗಿದೆ. ಏಕೆಂದರೆ, ಮಹಿಳೆಯರು, ಜಲ ಮತ್ತು ನಿರ್ಮಲೀಕರಣ ನಿರ್ವಹಣೆ ನಿರ್ವಹಿಸುವಲ್ಲಿ ಮಾತ್ರವಲ್ಲ, ತಮ್ಮಲ್ಲಿರುವ ಮಾಹಿತಿಗಳನ್ನು ಮಕ್ಕಳಿಗೆ ರವಾನಿಸುವ ಜವಾಬ್ದಾರಿಯನ್ನು ಹೊತ್ತಿರುತ್ತಾರೆ.

ಮೇಲೆ ವಿವರಿಸಿರುವಂತೆ, ಕಮ್ಯೂನಿಟಿಯು ಸರ್ಕಾರ ಮತ್ತು ಸಬ್ಸಿಡಿಗಳ ನೆರವಿಲ್ಲದೆ ಕಾರ್ಯ ನಿರ್ವಹಿಸುತ್ತಿರುವುದು ಕಾರ್ಯಕ್ರಮದ ಸಫಲತೆಗೆ ಕಾರಣವಾಗುತ್ತಿದೆ. ಆದ್ದರಿಂದ ಸರ್ಕಾರದ ಪಾತ್ರವನ್ನು ಸೀಮಿತಗೊಳಿಸುವ ಅಗತ್ಯವಿದೆ. ಸೂಕ್ತ ತಂತ್ರಜ್ಞಾನದ ಬಗ್ಗೆ ತಿಳುವಳಿಕೆ ನೀಡುವುದು, ನಿರ್ಮಲೀಕರಣದ ಸೌಲಭ್ಯಗಳ ನಿರ್ಮಾಣದ ಬಗ್ಗೆ ತಿಳುವಳಿಕೆ ನೀಡುವುದು, ಗ್ರಾಮೀಣ ಜನರಲ್ಲಿ ಜಾಗೃತಿಯನ್ನು ಮೂಡಿಸುವುದು, ಪ್ರೇರೇಪಿಸುವುದು ಮುಖ್ಯ ಬದಲಾವಣೆಗಳನ್ನು ತರುವ ಕಾರ್ಯಗಳು ಸೆಂಟ್ರಲ್ ರೂರಲ್ ಸ್ಯಾನಿಟೇಷನ್ ಪ್ರೋಗ್ರಾಮ್‌ನ ಶ್ರೇಷ್ಠ ಗುರುತುಗಳಾಗಿವೆ. ಈ ಕಾರ್ಯಕ್ರಮಗಳನ್ನು ಹ್ಯೂಮನ್ ರಿಸೋರ್ಸಸ್ ಡೆವಲಪ್ ಮೆಂಟ್‌ನ ವಿಭಾಗಗಳು ಹಮ್ಮಿಕೊಳ್ಳಲಿವೆ.

ನಿರ್ಣಾಯಕ ಹಂತಗಳಲ್ಲಿ ಮಹಿಳೆಯ ಪಾತ್ರ ಸಂವಿಧಾನ (73ನೇ ತಿದ್ದುಪಡಿ) ಕಾಯಿದೆ 1992ರ ಪ್ರಕಾರ, ಸಾಕಷ್ಟು ಸಂಖ್ಯೆಯಲ್ಲಿ ಮಹಿಳೆಯರು ಪಂಚಾಯತ್‌ಗಳ ಮೂಲಕ ಆಳ್ವಿಕೆ ಕಾರ್ಯಗಳಲ್ಲಿ ಒಳಗೊಳ್ಳಬಹುದು ಮತ್ತು ನಿರ್ಣಾಯಕ ಹಂತಗಳಲ್ಲಿ ಪಾಲುಗೊಳ್ಳಬಹುದು. ಸರ್ಕಾರೇತರ ಸಂಸ್ಥೆಗಳು ಮತ್ತು ಸ್ವಯಂ ಸಂಸ್ಥೆಗಳು ಮಹಿಳಾ

ಸದಸ್ಯರನ್ನು ಒಳಗೊಂಡಿರಬೇಕು. ನೀರಾವರಿ ಯೋಜನೆಯೇ ಆಗಿರಲಿ ಅಥವಾ ನೀರು ಸರಬರಾಜು ಯೋಜನೆಯೇ ಆಗಿರಲಿ, ಆರ್ಥಿಕ ಸಾಮಾಜಿಕ ಸರ್ವೇಯ ಪ್ರಕಾರ ಮಹಿಳೆಯ ಅವಶ್ಯಕತೆ ಅತ್ಯಗತ್ಯ.

ಮಹಿಳೆಯ ಪಾತ್ರವನ್ನು ಉತ್ತಮಗೊಳಿಸುವುದಕ್ಕಾಗಿ ಕಾರ್ಯಕ್ರಮಗಳು

ಮಹಿಳೆಯ ಬುದ್ಧಿಮತ್ತೆ ಮತ್ತು ಮಾಹಿತಿ ಜ್ಞಾನವನ್ನು ಉತ್ತಮಗೊಳಿಸುವ ಪ್ರಯತ್ನವನ್ನು ಈಗ ಪ್ರಸ್ತುತ ಇರುವ ಮತ್ತು ಹೊಸ ತಂತ್ರಜ್ಞಾನಗಳಲ್ಲಿ ಮಾಡಬೇಕು. ಹೊಸ ತಂತ್ರಜ್ಞಾನಗಳಲ್ಲಿ ಸಾಧ್ಯವಾದಷ್ಟು ಅಲ್ಪಾವಧಿ ಕೋರ್ಸ್‌ಗಳನ್ನು ಮತ್ತು ಉದ್ಯಮೀಕರಣದ ಅಭಿವೃದ್ಧಿ ಕೋರ್ಸ್‌ಗಳನ್ನು ವಿನ್ಯಾಸಗೊಳಿಸಿ, ಅದನ್ನು ಗ್ರಾಮ ಮಟ್ಟದಲ್ಲಿ ನಿರ್ದಿಷ್ಟ ಸ್ಥಳೀಯ ಅಗತ್ಯತೆಗಳನ್ನು ಪೂರೈಸುವಂತೆ ಸಂಘಟಿಸಬೇಕು.

ಮಹಿಳೆಯರ ಪಾತ್ರಗಳಲ್ಲಿ ಸಾಕಷ್ಟು ವೈವಿಧ್ಯತೆ ಇರಬೇಕು. ಮಹಿಳೆಯರು ತಮಗೆ ತಾವೇ ಹೆಚ್ಚು ಅವಕಾಶಗಳಲ್ಲಿ ಅಂದರೆ ಆಹಾರ ಸಂಸ್ಕರಣೆ, ಕೊಯ್ಲು ತಂತ್ರಜ್ಞಾನ, ಕೋಳಿ ಸಾಕಣೆ, ರೇಷ್ಮೆ ಹುಳು ಸಾಕಣೆ, ಮುಂತಾದವುಗಳಲ್ಲಿ ತೊಡಗಿಸಿಕೊಳ್ಳಬೇಕು.

ಗ್ರಾಮೀಣ ಮಹಿಳೆಯರಿಗಾಗಿ ಕಾರ್ಯಕ್ರಮಗಳನ್ನು ವಿಸ್ತರಿಸುವ ಪ್ರಯತ್ನ ಮಾಡಬೇಕು. ಈ ಕಾರ್ಯಕ್ಕಾಗಿ ಚೆನ್ನಾಗಿ ತರಬೇತಿ ಹೊಂದಿದ ಮಹಿಳಾ ಕಾರ್ಯಕರ್ತರುಗಳನ್ನು ಬಳಸಿಕೊಂಡಲ್ಲಿ ಅವರು ಮಹಿಳಾ ಚಟುವಟಿಕೆಗಳನ್ನು ಕನಿಷ್ಠ ಮಟ್ಟದಿಂದ ಉತ್ತಮಗೊಳಿಸುತ್ತಾರೆ. ಪ್ರಗತಿಶೀಲ ಕೃಷಿ ಮಹಿಳೆಯರನ್ನು ಗುರುತಿಸಿ ಅವರನ್ನು ಸಾಮರ್ಥ್ಯ ಸಂಪನ್ಮೂಲ ಮಹಿಳೆಯರನ್ನಾಗಿ ನೇಮಿಸಬಹುದು. ಈ ಮಹಿಳೆಯರು, ಸಂಶೋಧನೆ ನಡೆಸುತ್ತಿರುವ ವಿಜ್ಞಾನಿಗಳು ಮತ್ತು ಕಾರ್ಯಕರ್ತರೊಡನೆ ಕೂಡ ಕಲೆತು ಕೆಲಸ ಮಾಡುತ್ತಾರೆ. ಮಹಿಳೆಯರನ್ನು ದೃಷ್ಟಿಯಲ್ಲಿಟ್ಟುಕೊಂಡು ಹೊಸ ತಂತ್ರಜ್ಞಾನಗಳ ಅಭಿವೃದ್ಧಿಗೆ ಪ್ರಾಧಾನ್ಯತೆಯನ್ನು ಕೊಟ್ಟು, ಮಹಿಳೆಯರ ಸಮಸ್ಯೆಗಳ ಮೇಲೆ ಒಂದು ನಿರ್ದಿಷ್ಟ ಸಂಶೋಧನಾ ಕಾರ್ಯಕ್ರಮವನ್ನು ವಿನ್ಯಾಸಗೊಳಿಸಬೇಕು.

ಇದೇ ರೀತಿಯ ಸಂಶೋಧನಾ ಕಾರ್ಯಕ್ರಮಗಳನ್ನು ಗುಲಾಮಗಿರಿಯ ನಿರ್ಮೂಲನೆ, ಕಾರ್ಮಿಕ ವೈವಿಧ್ಯತೆ ಮತ್ತು ಗಳಿಕೆಯನ್ನು ವೃದ್ಧಿಗೊಳಿಸುವಿಕೆಯ ಮೇಲೂ ಕೈಗೊಳ್ಳಬೇಕು.

(ಕೃಪೆ : ಜಲಸಂಪನ್ಮೂಲ)

ಪೋಲೀಸು ಠಾಣೆಯಲ್ಲಿ 'ಕನ್ಯತ್ವ'ದ ಪರೀಕ್ಷೆ

ಅಸ್ಸಾಮಿನಲ್ಲಿ ನಡೆದ ಈ ಘಟನೆ ಕೇಳಿ ಶಾಕ್ ಆಯಿತು. ವಿದ್ಯಾವಂತ ಹೆಣ್ಣು ಮಕ್ಕಳ ಮೇಲೆ ಇಂತಹ ಅನಾಚಾರ ನಡೆಯಬಹುದಾದರೆ, ಉಳಿದವರ ಗತಿ ಏನು ? ಕೇವಲ ಅನುಮಾನದ ಮೇಲೆ ಪೋಲೀಸರು ಹೆಣ್ಣು ಮಕ್ಕಳನ್ನು ದಸ್ತಗಿರಿ ಮಾಡಬಹುದೆ, ಗಂಡು ವೈದ್ಯರನ್ನು ಕರೆಸಿ 'ಕನ್ಯತ್ವ'ದ ಪರೀಕ್ಷೆಗೆ ಹಚ್ಚಬಹುದೆ ? ಹದ್ದು ಮೀರಿ ನಡೆದಿರುವ ಅಸ್ಸಾಮಿನ ಪೋಲೀಸರ ವಿರುದ್ಧ ವಿಚಾರಣೆಯನ್ನು ಒತ್ತಾಯಿಸಲೇಬೇಕಿದೆ.

ಆದದ್ದು ಇಷ್ಟು, ಅಸ್ಸಾಮಿನ ನಲ್ಬರಿ ಜಿಲ್ಲೆಯಲ್ಲಿರುವ ರೀತಾ ದತ್ತಾ ಮತ್ತು ಶಿಖಾಮಣಿ ಭಟ್ಟಾಚಾರ್ಯ, ವಿದ್ಯಾವಂತ ಹುಡುಗಿಯರು. ಪದವೀಧರೆ ರೀತಾ ದತ್ತಾ ಸಮಾಜ ಸೇವಾ ಕಾರ್ಯದಲ್ಲಿ ಚಟುವಟಿಕೆಯಿಂದಿರುವಾಕೆ. ಈಕೆ 'ಅಸ್ಸಾಮ್ ಗಣ ಪರಿಷತ್' ಪಾರ್ಟಿಯ ಕಾರ್ಯಕರ್ತೆ. ಇತ್ತೀಚೆಗಷ್ಟೆ ಗ್ರಾಮ ಪಂಚಾಯಿತಿಗೆ ಅಧ್ಯಕ್ಷಳಾಗಿ ಚುನಾಯಿತಳಾದಳು. ಒಂದು ದಿನ ತಟ್ಟನೆ ಗೌಹಾತಿಯ ಸ್ಥಳೀಯ ಪತ್ರಿಕೆಯೊಂದು, ರೀತಾ ಮತ್ತು ಶಿಖಾಮಣಿ 'ಬ್ಲೂ ಫಿಲ್ಮ್'ನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಪ್ರಕಟಿಸಿಬಿಟ್ಟಿತು. ಸ್ಥಳೀಯ ಪೋಲಿಸರು ಈ ಇಬ್ಬರು ಹುಡುಗಿಯರನ್ನು ಜೈಲಿಗೆ ಎಳೆದೊಯ್ದರು. ಹುಡುಗಿಯರು ಎಷ್ಟೇ ಪ್ರತಿಭಟಿಸಿದರೂ, ಬಿಡದೆ ಅವರ 'ಕನ್ಯತ್ವ'ವನ್ನು ಬಲಾತ್ಕಾರದಿಂದ ಗಂಡು ವೈದ್ಯರಿಂದ ಪರೀಕ್ಷೆ ಮಾಡಿಸಿದರು. ಮೂರು ದಿನಗಳ ನಂತರ ಬೇಲ್ ಮೇಲೆ ಹೊರಬಂದ ಹುಡುಗಿಯರು 'ಯಾವುದೇ ಪುರಾವೆ ಇಲ್ಲದೆ, ಕೇವಲ ಅನುಮಾನದ ಮೇಲೆ, ಪತ್ರಿಕೆ ಯೊಂದರ ಹೇಳಿಕೆ ಮಾತಿನ ಮೇಲೆ ದಸ್ತಗಿರಿ ಮಾಡಿ, ಕನ್ಯತ್ವದ ಪರೀಕ್ಷೆಗೊಳಿಸಿದ ಅತಿ ಹೇಯ ಕಾರ್ಯ'ದ ಬಗ್ಗೆ ವಿರುದ್ಧ ಪ್ರತಿಭಟಿಸಿದರು. ನಲ್ಬರಿ ಜಿಲ್ಲೆಯ ಡೆಪ್ಯುಟಿ ಕಮಿಷನರ್ ಬಿ.ಕೆ. ಚಕ್ರವರ್ತಿ, ಸ್ಥಳೀಯ ಎಂ.ಎಲ್.ಎ. ನೀಲಮನಿ ಸೇನ್ ಬಳಿ ಹೋಗಿ ಪೋಲೀಸರ ವಿರುದ್ಧ ದೂರು ಹೇಳಿದರೆ, ಅದೇ ಪೋಲೀಸರು ಸಂಜೆ ಬಂದು ಪೋಲೀಸು ಠಾಣೆಗೆ ಬರುವಂತೆ ಬಲವಂತಿಸಿದರು. ರೀಟಾ ಇದರ ಹಿಂದೆಲ್ಲ ರಾಜಕೀಯ ಕೈವಾಡವನ್ನು ಅನುಮಾನಿಸುತ್ತಿದ್ದಾರೆ.

ಹೇಳಿಕೆಯ ಮಾತಿನ ಮೇಲೆ ಪೋಲೀಸರು ಯಾವ ಹುಡುಗಿಯನ್ನು ಬೇಕಾದರೂ ಜೈಲಿಗೆ ಎಳೆದೊಯ್ಯಬಹುದು, ಗಂಡು ವೈದ್ಯರಿಂದ ಕನ್ಯತ್ವದ ಪರೀಕ್ಷೆಗೊಳಿಯಬಹುದು-ಇಂಥಾ ಆಘಾತದ ಮಟ್ಟಕ್ಕೆ ಮಹಿಳೆ ಅಸುರಕ್ಷಿತಳಾಗಿದ್ದಾಳೆ. ಮೊದಲು ಪತ್ರಿಕೆಯ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇಡೀ ಪ್ರಕರಣದ ವಿಚಾರಣೆಯಾಗಬೇಕು. ಕನ್ಯತ್ವದ ಪರೀಕ್ಷೆಯಿಂದ ಪೋರ್ನೋ ಚಿತ್ರಗಳಲ್ಲಿ ನಟಿಸಿದ್ದು ಹೇಗೆ ತಿಳಿಯುತ್ತದೆಯೋ, ಪೋಲೀಸರ ನವನವೀನ ಅನಾಚಾರಗಳ ಬಗ್ಗೆ ತರಾಟೆಗೆ ತೆಗೆದುಕೊಳ್ಳಬೇಕು. ಈ ಇಡೀ ಪ್ರಕರಣದ ಬಗ್ಗೆ ವಿಚಾರಣೆಗೆ ಒತ್ತಾಯಿಸಿ, ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕೆಂದು ಕೇಳಿ, 'ನೆರವು' ಮತ್ತು 'ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ' ಸಂಘಟನೆಗಳು ಪತ್ರ ಬರೆದಿವೆ.

ಬದುಕುಳಿದು ಬಂದ ಸಾಹಸಗಾಥೆ !

ಆತ ಹೆಂಡತಿಯನ್ನು ಕ್ರೂರವಾಗಿ ಹೊಡೆದ, ಬಡಿದ. ಬಟ್ಟೆ ಕಿತ್ತು ಹಾಕಿ, ಕುತ್ತಿಗೆ ಹಿಚುಕಿ, ಸತ್ತಳೆಂದು ಖಾತರಿಯಾಗಿ ಕಾರಿನ ಡಿಕ್ಕಿಯಲ್ಲಿ ತುರುಕಿದ. ಐದು ಗಂಟೆ ಕಾರಿನ ಡಿಕ್ಕಿಯಲ್ಲಿ ಸಿಕ್ಕಿಕೊಂಡ ಆರತಿ ಅರೋರ ಸತ್ತಿರಲಿಲ್ಲ. ಉಸಿರು ಉಳಿದಿತ್ತು. ಕಾರಿನಿಂದ ಹೊರಬಿದ್ದು ತಪ್ಪಿಸಿಕೊಂಡ ಆಕೆ, ಪೋಲೀಸು ಠಾಣೆಯನ್ನು ಸಂಪರ್ಕಿಸಲು ಸಾಧ್ಯವಾಯಿತು. ಕ್ರೂರಿ ಗಂಡನನ್ನು ಸೆರೆ ಹಿಡಿಸಿದಳು.

ಇದು ಬಾಲಿವುಡ್ ಕತೆಯಲ್ಲ, ನಮ್ಮ ಸಮಾಜದಲ್ಲಿ ವಿದ್ಯಾವಂತ ಕುಟುಂಬಗಳಲ್ಲೂ ನಡೆಯುವ ಹೇಯಕರ ಕೌಟುಂಬಿಕ ಹಿಂಸೆಯ ಸತ್ಯ ಕಥೆ. ದಕ್ಷಿಣ ದಿಲ್ಲಿಯ ಮೇಲ್ವರ್ಗದ ಕುಟುಂಬದಲ್ಲಿ ನಡೆದ ಹಿಂಸಾಚಾರವಿದು. ಸಫ್ದರ್‌ಜಂಗ್ ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿರುವ ಆರತಿ, ಆಂಗ್ಲ ಪತ್ರಿಕೆಯೊಂದರೊಡನೆ ತಮ್ಮ ಕತೆಯನ್ನು ಹಂಚಿಕೊಂಡರು -

'ರಾತ್ರಿ ಹನ್ನೊಂದು ಗಂಟೆ, ಪ್ರತಿ ದಿನದಂತೆ ನಾವು ಮತ್ತೆ ಜಗಳ ಆಡಿದೆವು. ನಮ್ಮ ಐದು ವರ್ಷಗಳ ಜಟಾಪಟಿಯ ವಿವಾಹದಲ್ಲಿ ದಿನವೂ ಜಗಳವಾಡುವುದು ಸಾಮಾನ್ಯವಾಗಿತ್ತು. ಆ ದಿನವೂ ಎಂದಿನಂತೆ ಕಿತ್ತಾಡುವಾಗ, ನಾನು ನಮ್ಮ ಎರಡು ಸಣ್ಣ ಹೆಣ್ಣು ಮಕ್ಕಳೊಡನೆ ಮನೆ ಬಿಟ್ಟು ಹೋಗುವುದಾಗಿ ಬೆದರಿಸಿದೆ. ಕೋಪದಿಂದ ಕುದಿದ ನನ್ನ ಗಂಡ, ಮುಖ ಮೂತಿ ನೋಡದೆ ನನ್ನನ್ನು ಬಡಿಯತೊಡಗಿದ. ನನ್ನ ಹಲ್ಲು ಮುರಿದ. ಮುಖವನ್ನು ಪರಚಿದ. ಕೊನೆಗೆ ಏರ್‌ಗನ್ ತೆಗೆದುಕೊಂಡು ನನ್ನ ತಲೆಗೆ ಎರಡು ಬಾರಿ ಶೂಟ್ ಮಾಡಿದ. ನೋವು ಸಹಿಸಲು ಅಸಾಧ್ಯವಾಗಿತ್ತು. ನೆಲಕ್ಕೆ ಬಿದ್ದೆ. ಆದರೆ ನನಗಿನ್ನೂ ಪ್ರಜ್ಞೆ ತಪ್ಪಿರಲಿಲ್ಲ. ನನ್ನ ಪತಿ ಆರ್ನಾಲ್ಡ್ ನಾನು ಸತ್ತೆನೆಂದು ಭಾವಿಸಿದ, ತಕ್ಷಣ ನನ್ನನ್ನು ಕಂಬಳಿಯಲ್ಲಿ ಸುತ್ತಿದ. ನನ್ನ ಕೈ ಕೊಂಚ ಅಲುಗಿದ್ದು ಕಂಡು ಮತ್ತೆ ನನಗೆ ಬಡಿದ. ನೆಲದ ತುಂಬೆಲ್ಲ ರಕ್ತ ಹರಿದಿತ್ತು. ಆ ಕ್ಷಣ ನಾನು ಪ್ರಜ್ಞೆ ತಪ್ಪಿದೆ.

ಮತ್ತೆ ಯಾವಾಗಲೋ ನನಗೆ ಪ್ರಜ್ಞೆ ಬಂದು, ಕಣ್ಣು ತೆರೆದಾಗ, ನನ್ನ ಗಂಡ ನೆಲದ ಮೇಲಿನ ರಕ್ತವನ್ನು ಕೆಲಸದಾಕೆಯ ಸಹಾಯದಿಂದ ತೊಳೆಯುತ್ತಿರುವುದು ಕಂಡಿತು. ನಾನು ಎಚ್ಚರಗೊಂಡಿದನ್ನು ಕಂಡವನೇ ನನ್ನ ಕುತ್ತಿಗೆ ಹಿಚುಕಿದ. ಈ ಕ್ಷಣ ನನಗೆ ಅನಿಸಿತ್ತು, ನಾನು ಬದುಕುಳಿಯ ಬೇಕಿದ್ದರೆ ಸತ್ತಂತೆ ನಿರ್ಜೀವವಾಗಿ ಬಿದ್ದುಕೊಳ್ಳಬೇಕು. ನಾನು ಕುಸಿದು ಬಿದ್ದೆ. ನಾನು ಈಗ ನಿಜಕ್ಕೂ ಸತ್ತಿದ್ದೇನೆ ಎಂದು ಭಾವಿಸಿದ ಆರ್ನಾಲ್ಡ್, ರಕ್ತದಿಂದ ತೋಯ್ದ ನನ್ನ ಬಟ್ಟೆಯನ್ನು ಬಿಚ್ಚಿ, ನನ್ನನ್ನು ಹೊರಕ್ಕೆ ಎಳೆದುಕೊಂಡು ಬಂದು, ಕಾರಿನ ಡಿಕ್ಕಿಯಲ್ಲಿ ತುರುಕಿದ. ಆರ್ನಾಲ್ಡ್ ಕೆಲಸದಾಕೆಗೆ ಹೇಳಿದ 'ಹೆಣವನ್ನು ಸಿಮ್ಲಾದಲ್ಲಿ ಎಸೆದು ಬರುತ್ತೇನೆ. ಯಾರಾದರೂ ಕೇಳಿದರೆ ಆರತಿ ಓಡಿಹೋದಳು ಎಂದು ಹೇಳು.'

ಆರ್ನಾಲ್ಡ್ ಇಡೀ ರಾತ್ರಿ ಕಾರು ಓಡಿಸಿದ. ನನ್ನ ರಕ್ತಸಿಕ್ತ ಬಟ್ಟೆಗಳನ್ನು ಅದೆಲ್ಲೋ ಎಸೆದ. ಮೂರು ಬಾರಿ ನನ್ನನ್ನು ಎಸೆಯಲು, ಕಾರನ್ನು ನಿಲ್ಲಿಸಿದ. ಆದರೆ ದಾರಿಯಲ್ಲಿ ಒಂದೇ ಸಮನೆ ಹಾದು ಬಂದ ವಾಹನಗಳು, ಅವನ ಯೋಜನೆಗೆ ಅಡ್ಡಿ ಬಂದವು. ಇಷ್ಟೆಲ್ಲ ಹೊತ್ತು ನಾನು, ಕಾರಿನ ಡಿಕ್ಕಿಯಲ್ಲಿ ಉಸಿರು ಕಟ್ಟುತ್ತಾ ಹೊರಳುತ್ತಿದ್ದೆ. ಇಡೀ ದೇಹ ನೋವಿನಿಂದ ನುಲಿಯುತ್ತಿತ್ತು. ಗಂಟೆಗಟ್ಟಲೆ ರಾತ್ರಿಯೆಲ್ಲ ಕಾರು ಓಡಿಸಿ, ಒಂದು ಕಡೆ ಕಾರು ನಿಲ್ಲಿಸಿದ. ಕಾರಿಗೆ ಬೀಗ ಹಾಕಿ ಇಳಿದ ಸದ್ದು ಕೇಳಿಸಿತು. ಇಷ್ಟು ಹೊತ್ತು ಒಳಗೆ ನಾನು, ಡಿಕ್ಕಿಯೊಳಗಿನ 'ಬಟನ್'ಗಳನ್ನು ಅಮುಕುತ್ತಾ, ನೂಕುತ್ತಾ ಒದ್ದಾಡುತ್ತಿದ್ದೆ. ತಟ್ಟನೆ ಕಾರಿನ ಡಿಕ್ಕಿಯ ಬಾಗಿಲು ತೆರೆದುಕೊಂಡಿತು.

ಯಾವ ಕ್ಷಣವೂ ಆರ್ನಾಲ್ಡ್ ಬಂದು ನನ್ನನ್ನು ಮತ್ತೆ ಬಡಿಯುವನೆಂದು ಹೆದರಿದ ನಾನು ಹತ್ತಿರದಲ್ಲಿದ್ದ ಪೆಟ್ರೋಲ್ ಪಂಪ್ ಕಡೆಗೆ ಓಡಿದೆ. ಪೆಟ್ರೋಲ್ ಪಂಪ್ ಬಳಿಯ ಮರಳಿನ ಗುಡ್ಡೆಯ ಮೇಲೆ ಕುಸಿದು ಬಿದ್ದೆ. ಆದರೆ ಗಂಡನ ಭಯ ನನಗೆ ಎಲ್ಲಿಲ್ಲದ ಶಕ್ತಿ ನೀಡಿತ್ತು. ಮತ್ತೆ ಎದ್ದು ಓಡಿದೆ. ನನ್ನ ದೇಹದ ಮೇಲೆ ಒಂದಿಷ್ಟು ಪ್ಲಾಸ್ಟಿಕ್ ಬಿಟ್ಟರೆ ಮತ್ತೇನೂ ಇರಲಿಲ್ಲ. ನನ್ನ ನಗ್ನ ಸ್ಥಿತಿಗೆ ನಾಚುವ ವ್ಯವಧಾನವೂ ಇರಲಿಲ್ಲ. ಪೆಟ್ರೋಲ್ ಪಂಪ್ ತಲುಪಿದಾಗ, ಅಲ್ಲಿದ್ದ ಅಟೆಂಡೆಟರನ್ನು ಪೋಲೀಸು ಠಾಣೆಗೆ ಫೋನ್ ಮಾಡುವಂತೆ ಬೇಡಿದೆ. ನಾನಿದ್ದ ಸ್ಥಿತಿಯನ್ನು ಕಂಡು ದಿಗ್ಭ್ರಾಂತರಾದ ಅವರು ಮೊದಲು ನನ್ನ ದೇಹವನ್ನು ಮುಚ್ಚಲು ತಮ್ಮದೊಂದು ಸಮವಸ್ತ್ರ ನೀಡಿದರು. ನಂತರ ಪೋಲೀಸರಿಗೆ ಫೋನ್ ಮಾಡಿ, ನನ್ನನ್ನು ಸಫ್ದರ್‌ಜಂಗ್ ಆಸ್ಪತ್ರೆಗೆ ಕರೆ ತಂದರು.

ಹಿಂದೊಮ್ಮೆ ನಾನು ಪತಿಯ ಹಿಂಸೆ ತಾಳಲಾರದೆ, ಪೋಲೀಸರಿಗೆ ದೂರು ನೀಡಿದ್ದೆ. ಒಂದು ದಿನ ಅವನನ್ನು ಜೈಲಿನಲ್ಲಿ ಇಟ್ಟಿದ್ದರು. 'ಮತ್ತೆ ಹೆಂಡತಿಗೆ ಹಿಂಸೆ ಮಾಡುವುದಿಲ್ಲ' ಎಂದು ಬರೆದು ಕೊಟ್ಟ ಮೇಲೆ ಬಿಡುಗಡೆ ಮಾಡಿದ್ದರು. ಆದರೆ ಮನೆಗೆ ಬಂದೊಡನೆ ಮತ್ತೆ ಅವನ ಹಿಂಸೆ ಯಥಾಪ್ರಕಾರ ಆರಂಭವಾಯಿತು. ಗಂಡನಿಂದ ಬೇರ್ಪಟ್ಟು ಐದು ತಿಂಗಳು

ಮಕ್ಕಳೊಂದಿಗೆ ಬೇರೆಯೂ ಇದ್ದೆ. ಮತ್ತೆ ಬಂದು ಆರ್ನಾಲ್ಡ್ ಗೋಗರೆದಾಗ, ನನ್ನ ಕಾಲು ಮುಟ್ಟಿ ಕ್ಷಮೆ ಯಾಚಿಸಲೂ ಸಿದ್ಧವಾದಾಗ, ಬಹುಶಃ ಈ ಬಾರಿ ಸುಧಾರಿಸಿದ್ದಾನೆ ಎಂಬ ಅರೆನಂಬುಗೆಯಲ್ಲಿ ಹಿಂತಿರುಗಿದ್ದೆ. ಆದರೆ ಕೆಲವೇ ದಿನಗಳಲ್ಲಿ ಆರ್ನಾಲ್ಡ್ ಹಿಂದಿನದಕ್ಕಿಂತ ಹೆಚ್ಚು ಕ್ರೌರ್ಯದಿಂದ ನಡೆದು ಕೊಳ್ಳತೊಡಗಿದ. ಹಿಂಸೆ ಕ್ರೌರ್ಯ ಅವನಿಗೆ ಪ್ರಿಯವಿತ್ತು. ಹಾಗೆಂದೇ ಆತನ ಬಳಿ ಗನ್ ಇತ್ತು. ವಿಪರೀತ ಅನುಮಾನದ ಈ ವ್ಯಕ್ತಿಗೆ ನಾನು ಮತ್ಯಾರೊಡನೆಯೋ ಸಂಬಂಧ ಇಟ್ಟು ಕೊಂಡಿದ್ದೇನೆ ಎಂಬ ಸಂಶಯ. ಈಗ ನನಗನಿಸುತ್ತದೆ, ಬಹುಶಃ ಕೆಲಸದಾಕೆಯೊಡನೆ ಅವನ ಸಂಬಂಧವಿದ್ದಿರಬಹುದು. ಇಲ್ಲದಿದ್ದರೆ, ಆಕೆ ನನ್ನ 'ಕೊಲೆ'ಗೆ ಅಷ್ಟೊಂದು ಸಹಕಾರ ನೀಡುತ್ತಿರಲಿಲ್ಲ.'

ಇಷ್ಟು ದಿನ 'ಮಕ್ಕಳಿಗಾಗಿ' ನಾನು ಈ ಹಿಂಸೆಯ ವಿವಾಹದಲ್ಲಿ ಉಳಿದಿದ್ದೆ. ಹಿಂಸೆಯ ಈ ಪರಮಾವಧಿಯನ್ನು ಮುಟ್ಟಿಬಂದ ಮೇಲೆ, ಇನ್ನು ಈತನಿಂದ ವಿಚ್ಛೇದನ ಪಡೆಯದೆ ಬೇರೆ ಮಾರ್ಗವಿಲ್ಲ. ಇಂತಹ ಹಿಂಸೆಯ ವಿವಾಹದಲ್ಲಿ ಮಕ್ಕಳಿಗೆ ಅಪಾಯವೇ ಹೆಚ್ಚು ಎಂದು ಈಗ ನನಗೆ ಜ್ಞಾನೋದಯ ವಾಗುತ್ತಿದೆ. ನನ್ನ ತಂದೆ ತಾಯಿ ಮಾತ್ರವಲ್ಲ, ಅತ್ತೆ ಮಾವನವರ ಸಹಕಾರವೂ ಇಂದು ನನಗಿದೆ. ಈ ದುಃಸ್ವಪ್ನದಿಂದ ಎದ್ದು ಹೊರ ಬರುತ್ತೇನೆ.'

ಇದು ಆರತಿ, ಆಂಗ್ಲ ಪತ್ರಿಕೆಯೊಂದಕ್ಕೆ ಹೇಳಿಕೊಂಡ ಕತೆ. ಹತ್ತು ವರ್ಷಗಳ ಹಿಂದೆ ಇದೇ ಬಗೆಯ ಕ್ರೌರ್ಯದ ವಿವಾಹದಿಂದ ಹೊರಬಂದ ಫ್ಲೇವಿಯಾರನ್ನು ಭೇಟಿಯಾದಾಗ ಅವರು ಹೇಳಿದ ಮಾತುಗಳು ನೆನಪಿಗೆ ಬಂದವು. 'ವೈವಾಹಿಕ ಬದುಕಿನಲ್ಲಿ ಗಂಡನ ಹೊಡೆತ ಕೇವಲ ಕೆಳವರ್ಗಕ್ಕೆ, ಅವಿದ್ಯಾ ವಂತರಿಗಷ್ಟೇ ಅನ್ವಯಿಸುತ್ತದೆ, ಕುಟುಕರು, ಕೆಡಕರು ಮಾತ್ರ ಬಡಿಯುತ್ತಾರೆ ಎಂಬ ಅನೇಕ ತಪ್ಪು ಕಲ್ಪನೆಗಳು ನಮ್ಮಲ್ಲಿವೆ. ವೈವಾಹಿಕ ಬದುಕಿನಲ್ಲಿ ಹಿಂಸೆ ಹೇಗೆ ಸ್ಫೋಟವಾಗುತ್ತದೆ. ಹೇಗೆ ಹೆಣ್ಣನ್ನು ದೈಹಿಕವಾಗಿ, ಮಾನಸಿಕವಾಗಿ ಛಿದ್ರವಾಗಿಸುತ್ತದೆ - ಎಂಬೆಲ್ಲ ಪ್ರಶ್ನೆಗಳಿಗೆ ನನ್ನ ಬದುಕು ಉತ್ತರವಾಗಿದೆ' ಎಂದಿದ್ದರು.

ಮರ್ಯಾದೆಯ ಮುಸುಕಿನಲ್ಲಿ, ಮನೆತನದ ಗೌರವ ಬೀದಿ ಪಾಲಾಗುತ್ತೆ ಎಂಬ ಭಯದಲ್ಲಿ, ವಿದ್ಯಾವಂತರಾಗಿದ್ದೂ, ದುಡಿಯುತ್ತಿರುವ ಮಹಿಳೆಯರೂ ಬಹಳ ಬಾರಿ ಗಂಡನ ಬಡಿತವನ್ನು ಸದ್ದಿಲ್ಲದೆ ಸಹಿಸಿಕೊಳ್ಳುತ್ತಾರೆ. ಆರತಿಯಂತೆ, ಆ ಬಡಿತ ಜೀವಕ್ಕೇ ಸಂಚಕಾರವಾದಾಗ ಎಚ್ಚೆತ್ತು ಕೊಳ್ಳುತ್ತಾರೆ. ಸಾವಿನ ಬಾಗಿಲಿಗೆ ಹೋಗಿ ಹಿಂತಿರುಗಿದ ಆರತಿಗೆ ನ್ಯಾಯ ದೊರೆಯಲೆಂದು ಆಶಿಸೋಣ. ಸದ್ಯಕ್ಕೆ ಪತಿ ಆರ್ನಾಲ್ಡ್ ಅನ್ನೂ, ಕೆಲಸದಾಕೆಯನ್ನು ಬಂಧಿಸಿದ್ದಾರೆ.

ಪುಸ್ತಕ ಪರಿಚಯ

'ಅರ್ಲಿ ಫೆಮಿನಿಸ್ಟ್ಸ್ ಆಫ್ ಕಲೋನಿಯಲ್ ಇಂಡಿಯ'

ಲೇಖಕಿ : ಭಾರತಿ ರಾಯ್

ಈ ಪುಸ್ತಕ ಮಹಿಳಾ ಹಕ್ಕುಗಳಿಗಾಗಿ, ಸ್ತ್ರೀ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಇಬ್ಬರು ಮಹಿಳೆಯರ ಕುರಿತಾಗಿದೆ. ಸರಳಾ ದೇವಿ ಚೌಧುರಾನಿ ಮತ್ತು ರೋಕೆಯಾ ಶಕಾವತ್ ಹುಸೇನ್ - ಈ ಇಬ್ಬರು ಮಹಿಳೆಯರು. ಇಪ್ಪತ್ತನೇ ಶತಮಾನದ ಬಂಗಾಲದ ಹಿನ್ನೆಲೆಯಲ್ಲಿ ಬರೆದ ಇವರ ಬರಹಗಳು ಸಮಾಜದ 'ಹಿಪಾಕ್ರಸಿ'ಯ ಬಗ್ಗೆ ಬಡಿದು ಎಚ್ಚರಿಸುವಂತಿದ್ದವು. ಆದರೆ ಈ ಇಬ್ಬರು ಮಹಿಳೆಯರ ಬದುಕೂ ವಿಭಿನ್ನವಾಗಿತ್ತು. ಅವರ ಬದುಕನ್ನು, ಹಿನ್ನೆಲೆಯನ್ನು ವಿವರಿಸುವ ಭಾರತಿ ರಾಯ್, ಅವರ ಆದರ್ಶಗಳ ನಡುವಿನ ಹೋಲಿಕೆಯನ್ನು ಎತ್ತಿ ತೋರಿಸಿದ್ದಾರೆ.

ಸರಳಾ ಮತ್ತು ರೋಕೆಯಾ, ಶ್ರೀಮಂತ ಕುಟುಂಬದ ಹಿನ್ನೆಲೆಯಿಂದ ಬಂದವರು. ಇಬ್ಬರೂ ಬೆಂಗಾಲಿಗಳು, ಆದರೆ ಇಬ್ಬರೂ ಬೆಂಗಾಲಿಗಳಲ್ಲದ ವಿಧುರರನ್ನು ವಿವಾಹವಾಗಿ ಬಂಗಾಲದ ಹೊರಗೆ ವಾಸಿಸುತ್ತಿದ್ದರು. ಪತಿಯ ಮರಣದ ನಂತರ, ಇಬ್ಬರೂ ಬಂಗಾಲಕ್ಕೆ ಹಿಂತಿರುಗಿದರು. ಈ ಇಬ್ಬರು ಮಹಿಳೆಯರು ಯಥೇಚ್ಛರಾಗಿ ಬರೆದವರು. ಮಹಿಳೆಯರ ಹಕ್ಕುಗಳಿಗಾಗಿ, ಸ್ತ್ರೀ ಶಿಕ್ಷಣಕ್ಕಾಗಿ, ಹೋರಾಡಿದವರು ಹಾಗೂ ಮಹಿಳಾ ಸಂಘ ಸಂಸ್ಥೆಗಳನ್ನು ಸ್ಥಾಪಿಸಿದರು. ಹೀಗಿದ್ದೂ ಇವರ ಬದುಕಿನ ನಡುವೆ ಅಂತರವಿತ್ತು.

ಸರಳಾ ಪುರೋಗಾಮಿ ಹಿಂದು ಕುಟುಂಬದಿಂದ ಬಂದಾಕೆ. ಈಕೆ ರವೀಂದ್ರನಾಥ ಠಾಗೂರರ ಅಕ್ಕ ಸ್ವರ್ಣಕುಮಾರಿ ದೇವಿ ಅವರ ಮಗಳು. ಸ್ವರ್ಣಕುಮಾರಿ ದೇವಿ 'ಭಾರತಿ' ಪತ್ರಿಕೆಯ ಸಂಪಾದಕರಾಗಿದ್ದವರು. ಟಾಗೂರರ ಬಹಳಷ್ಟು ಕೃತಿಗಳು ಮೊದಲು 'ಭಾರತಿ'ಯಲ್ಲಿ ಪ್ರಕಟವಾಗಿದ್ದವು. ಇಂತಹ ತಾಯಿಯ ಮಗಳಾದ ಸರಳ, ಪದವೀಧರಳಾಗಿದ್ದಳು. ಸರಳಾ, 'ಆಲ್ ಇಂಡಿಯಾ ವುಮೆನ್ಸ್ ಆರ್ಗನೈಸೇಷನ್' ಕಟ್ಟಿದಳು. ಸ್ವದೇಶಿ ಚಳುವಳಿಯಲ್ಲಿ, ಸ್ವಾತಂತ್ರ ಹೋರಾಟದಲ್ಲಿ ಸರಳಾ ಭಾಗವಹಿಸಿದಳು.

ಇದಕ್ಕೆ ವಿರುದ್ಧವಾದ ಬಾಲ್ಯ, ರೋಕೆಯಾದು. ಈಕೆಯ ತಂದೆ, ರೋಕೆಯಾಳನ್ನು ಶಾಲೆಗೆ ಹೋಗಲು ಬಿಡಲಿಲ್ಲ. ಹೆಣ್ಣು ಮಗಳು ಬೆಂಗಾಲಿ ಅಥವಾ ಇಂಗ್ಲೀಷ್ ಕಲಿಯುವುದರ ಬಗ್ಗೆಯೂ ಆತನ ವಿರೋಧವಿತ್ತು. ಹೆಣ್ಣು ಮಗು ಉರ್ದು ಅಥವಾ ಪರ್ಷಿಯನ್ ಭಾಷೆ ಕಲಿಯಲು ಅಡ್ಡಿಯಿರಲಿಲ್ಲ. ಆದರೆ ರೋಕೆಯಾ, ತನ್ನ ತಂದೆಗೆ ತಿಳಿಯದಂತೆ, ಇಂಗ್ಲಿಷನ್ನು ತನ್ನ ಸೋದರ ಇಬ್ರಾಹಿಂನಿಂದ ಕಲಿತಳು. ನಂತರ ಬೆಂಗಾಲಿ ಯನ್ನೂ ಕಲಿತಳು. ತನ್ನ ಬರಹದಲ್ಲಿ ಸ್ತ್ರೀ ಸ್ವಾತಂತ್ರದ ಬಗ್ಗೆ ಗಟ್ಟಿಯಾಗಿ ಹೇಳಿದಳು.

ಸ್ವಾತಂತ್ರ ಪೂರ್ವ ದಿನಗಳ, ಆರಂಭದ ಈ ಸ್ತ್ರೀವಾದಿಗಳ ಬದುಕು ಚರಿತ್ರೆಯ ಒಂದು ಅಪೂರ್ವ ಅಧ್ಯಾಯವನ್ನು ತೆರೆದಿಟ್ಟಿದೆ.

ಕ್ಯಾನ್ಸರ್ ಎದುರಿಸಿ ಇಪ್ಪತ್ತೈದು ವರ್ಷ

'ಸಾವು ಒಳಗೆ ಬರಲೆ ಎಂದಾಗ, ಸ್ವಲ್ಪ ತಾಳು ಕೆಲಸವಿದೆ ಎಂದೆ'-ಮೂರನೆ ಬಾರಿ ಕ್ಯಾನ್ಸರಿಗೆ ಶಸ್ತ್ರಕ್ರಿಯೆ ಮಾಡಿಸಿಕೊಂಡು ಚೇತರಿಸಿಕೊಳ್ಳುತ್ತಿದ್ದ ಅನುಪಮಾ ನಿರಂಜನ ಬರೆದ ಕತೆಯು ಸುದೀರ್ಘ ಶೀರ್ಷಿಕೆ ಇದು. ಅನುಪಮಾ ಸಾವನ್ನು ಅಲ್ಲೇ ಹೊಸಿಲಲ್ಲೇ ತಡೆ ಹಿಡಿದು 'ತಾಳು' ಎಂದು ಆಜ್ಞಾಪಿಸಿ, ಹನ್ನೆರಡು ವರ್ಷಗಳು ಕ್ಯಾನ್ಸರನ್ನು ಎದುರಿಸಿದರು. ಆದರೆ 25 ವರ್ಷ ಕ್ಯಾನ್ಸರನ್ನು ಎದುರಿಸಿ, ಸೋಲದೆ ಈಗಲೂ ಹೋರಾಡುತ್ತಿರುವ ಮಹಿಳೆ ಸುದರ್ಶನ್ ಕೌಷಲ್ !

ಸುದರ್ಶನ್ ಹುಟ್ಟಿದ್ದು ಪಂಜಾಬಿನ ಪಾಟಿಯಾಲದಲ್ಲಿ. ತಂದೆ ಶಾಲೆಯೊಂದರ ಪ್ರಾಚಾರ್ಯರು, ವಿದ್ಯಾವಂತರು, ಬಹಳಷ್ಟು ಓದಿಕೊಂಡವರು. ಹೀಗಿದ್ದೂ ಗಂಡು ಮಗನಿಲ್ಲದೆ ವಂಶೋದ್ಧಾರವಿಲ್ಲ ಎಂದು ನಂಬಿದವರು ! ಸುದರ್ಶನ ತಾನು ಗಂಡು ಮಗುವಿಗಿಂತ ಕಡಿಮೆ ಇಲ್ಲ ಎಂದು ತಂದೆಗೆ ಸಾಬೀತು ಮಾಡುವ ಹುಮ್ಮಸ್ಸಿನಲ್ಲಿ ಹೊರಟಳು. ಓದಿನಲ್ಲಿ ಮುಂದಾದಳು. ಹೊಲಿಗೆ ಕರಕುಶಲ ಕಲೆಯಲ್ಲೂ ಈಕೆ ಮುಂದು. ಆದರೆ ರಕ್ತದ ಕ್ಯಾನ್ಸರಿಗೆ ಬಲಿಯಾದ ತಾಯಿಯ ಕೊನೆಯ ಇಚ್ಛೆ, ಮಗಳ ಮದುವೆ ನೋಡುವುದಾಗಿತ್ತು. ಹದಿನೈದನೇ ವರ್ಷಕ್ಕೇ ಸುದರ್ಶನಳ ವಿವಾಹ ನಡೆದು ಹೋಯಿತು. ತಾನೆಂದೂ ಭೇಟಿಯಾಗದ ಅಪರಿಚಿತನೊಡನೆ ಸುದರ್ಶನಳ ಮದುವೆ ನೆರವೇರಿತ್ತು.

ವಿವಾಹವಾದ ದಿನವೇ ಅವಳೆಲ್ಲ ಒಡವೆಗಳನ್ನು, ತವರಿನಿಂದ ತಂದ ಸಾಮಾನು, ಹಣ ಎಲ್ಲವನ್ನೂ ಅತ್ತೆ ಕಿತ್ತು ಕೊಂಡಳು. ವೈವಾಹಿಕ ಬದುಕು ದೀರ್ಘ ದುಃಸ್ವಪ್ನವಾಗಿತ್ತು. ಮನೆಯಿಂದ ದೂರವಾಗಿ ದುಡಿಯುತ್ತಿದ್ದ ಗಂಡನೊಡನೆ ಹೋಗಿ ಸೇರಲೂ ಸುದರ್ಶನಳನ್ನು ಬಿಡಲಿಲ್ಲ. ಕಡೆಗೂ ಸುದರ್ಶನ ಗಂಡನನ್ನು ಸೇರಿದ್ದು, ಹತ್ತು ವರ್ಷಗಳ ನಂತರ. ಆದರೆ ಸುದರ್ಶನ ಗರ್ಭಿಣಿಯಾಗಿ, ಹೆಣ್ಣು ಮಗುವಿಗೆ ಜನ್ಮ ಕೊಟ್ಟಾಗ, ಆಕಾಶವೇ ಮುಗಿಬಿದ್ದಿತು. ಅತ್ತೆ ಮಾವನವರನ್ನು ಒಲಿಸಲು ಹೆಣ್ಣು ಮಗುವಿಗೆ 'ರಾಜೇಶ್' ಎಂದು ಹೆಸರಿಟ್ಟಿದ್ದಳು. ಎರಡನೆಯ ಮಗು ಗಂಡಾದಾಗ ಮಾತ್ರ ಸುದರ್ಶನಳಿಗೆ ಹೋದ ಉಸಿರು ಬಂದಂತಾಯಿತು. ಕಡೆಗೂ ಗಂಡು ಹೆತ್ತ ಸುದರ್ಶನಳಿಗೆ ತನ್ನ ಪತಿಯೊಡನೆ ಮುಂಬಯಿ ಯಲ್ಲಿ ನೆಲೆಸುವ ಅವಕಾಶ ದೊರೆಯಿತು.

ಮುಂಬಯಿಗೆ ಬಂದು ಕೆಲವೇ ತಿಂಗಳು, ಸುದರ್ಶನಳ ಬಲ ಸ್ತನದ ಮೇಲೆ ಅಕ್ಕಿ ಕಾಳಿನಷ್ಟು ಸಣ್ಣ ಗೆಡ್ಡೆ ಕಾಣಿಸಿಕೊಂಡಿತು. ಸುದರ್ಶನ, ಮಗ ಅನಿಲಗೆ ಹಾಲೂಡಿಸುತ್ತಿದ್ದ ಸಮಯವದು. ಬಯಾಪ್ಸಿಗೆ ಕಳುಹಿಸಿದಾಗ, ಕ್ಯಾನ್ಸರ್ ಇರುವುದು ತಿಳಿದು ಬಂದಿತು. ಸುದರ್ಶನಳ ಜಗತ್ತು ಕಂಪಿಸಿತು. ಆದರೆ ಎಳೆಯ ಮಕ್ಕಳ ತಾಯಿ ಸುದರ್ಶನ ಬದುಕನ್ನು ಬಿಡಲು ಸಿದ್ಧವಿರಲಿಲ್ಲ, ಭರವಸೆಯನ್ನು ಕಳೆದು ಕೊಳ್ಳಲಿಲ್ಲ.

ಟಾಟಾ ಆಸ್ಪತ್ರೆಯಲ್ಲಿ ಸುದರ್ಶನಳ ಬಲ ಸ್ತನವನ್ನು ತೆಗೆದು ಹಾಕಲಾಯಿತು. ಕಿಮೋಥೆರಪಿ ನೀಡಲಾಯಿತು. ಕೂದಲೆಲ್ಲ ಉದುರಿಹೋಯಿತು. ಹೆಣ್ಣಾಗಿ ಸ್ತನ ಕಳೆದು ಕೊಂಡದ್ದು ಕಾಡಿದರೂ, ಸುದರ್ಶನ ತನ್ನ ಮಕ್ಕಳಿಗೆ ತಾಯಿಯಾಗಿ ಉಳಿಯ ಬಯಸಿದ್ದಳು. ಕೂದಲೆಲ್ಲ ಉದುರಿ ಹೋದ ಸುದರ್ಶನಳನ್ನು ಅತ್ತೆ ಮಾವ ಮೂದಲಿಸಿ 'ನೀನು ಸಾಯುವುದು ಖಂಡಿತಾ, ಸುಮ್ಮನೆ ಹೋರಾಡಬೇಡ' ಎಂದರೂ, ಸುದರ್ಶನ ಧೈರ್ಯ ಕಳೆದುಕೊಳ್ಳಲಿಲ್ಲ. ಸುದರ್ಶನಳಿಗೆ ತನ್ನ ಗುರಿಯ ಅರಿವಿತ್ತು. 'ನನ್ನ ಮಕ್ಕಳಿಗಾಗಿ ನಾನು ಬದುಕ ಬಯಸಿದ್ದೆ. ಯಾರೂ ನನ್ನ ಮಕ್ಕಳನ್ನು ನನ್ನಷ್ಟು ಪ್ರೀತಿಯಿಂದ ನೋಡಿಕೊಳ್ಳಲಾರರೆಂದು ನನಗೆ ತಿಳಿದಿತ್ತು' ಸುದರ್ಶನ ಆ ದಿನಗಳನ್ನು ನೆನೆಸಿಕೊಳ್ಳುತ್ತಾರೆ.

ಇಷ್ಟೆಲ್ಲ ದುರಂತದ ನಡುವೆ, ಮತ್ತೊಂದು ದುರಂತವೂ ಹಾದು ಹೋಯಿತು. ಸುದರ್ಶನಳ ಏಕ ಮಾತ್ರ ಸೋದರಿ ಸಂತೋಷ್ ಕ್ಯಾನ್ಸರಿಗೆ ತುತ್ತಾಗಿ ಸತ್ತಳು. ಇಂತಹ ಎದೆಬಿರಿವ ಘಟನೆಯೂ, ಸುದರ್ಶನಳ ಮನೋಸ್ಥೈರ್ಯವನ್ನು ಅಲುಗಿಸಲಿಲ್ಲ. ಆಸ್ಪತ್ರೆಯಿಂದ ಹೊರಬಂದ ದಿನವೇ, ತನ್ನ ಮನೆಯ ಕೆಲಸದಲ್ಲಿ ಸಂಪೂರ್ಣ ತೊಡಗಿದಳು. ಕಿಮೋಥೆರಪಿ ತೆಗೆದುಕೊಂಡು ಕಲ್ಯಾಣ್ ರೈಲು ನಿಲ್ದಾಣದಿಂದ ತನ್ನ ಮನೆಗೆ ನಡೆದೇ ಬರುತ್ತಿದ್ದಳು. ಕ್ಯಾನ್ಸರಿನ ಮೊದಲ ಆಕ್ರಮಣದಲ್ಲಿ ಜಯಗಳಿಸಿ ಸುದರ್ಶನ ಚೇತರಿಸಿಕೊಂಡಳು.

ಮುಂದಿನ ಹತ್ತು ವರ್ಷಗಳ ಕಾಲ, ಎಲ್ಲವೂ ಸ್ವಸ್ಥವಿತ್ತು. ಆದರೆ ಒಂದು ದಿನ, ಎಡ ಸ್ತನದಲ್ಲಿ ಸಣ್ಣ ಗೆಡ್ಡೆ ಕಾಣಿಸಿ ಕೊಂಡಿತು. ಸುದರ್ಶನ ಈ ಬಾರಿ ಬೆದರಲಿಲ್ಲ, ತಮ್ಮ ಹಣೆಬರಹವನ್ನು ಹಳಿಯಲಿಲ್ಲ. ವೈದ್ಯರು 'ರೇಡಿಯೇಷನ್' ಚಿಕಿತ್ಸೆ ಸಾಕು ಎಂದರೂ, ಸುದರ್ಶನ ರೋಗಗ್ರಸ್ಥ ಸ್ತನವನ್ನು ಕಿತ್ತೆಸೆಯಲು ಬಯಸಿದರು. ಸುದರ್ಶನ ಇಂತಹ ದೊಡ್ಡ ಆಪರೇಷನ್‌ಗೆ ತಾವೊಬ್ಬರೇ ಹೋಗಿ ಆಸ್ಪತ್ರೆಗೆ ಅಡ್ಮಿಟ್ ಆದರು. ಆಪರೇಷನ್ ನಂತರ ವೈದ್ಯರು ಆಕೆಯ ಕ್ಯಾನ್ಸರ್

ವಾಸಿಯಾಗಿರುವುದಾಗಿ ಘೋಷಿಸಿದರು. ಮುಂದಿನ ಏಳು ವರ್ಷಗಳ ಕಾಲ ವೈದ್ಯರು ನೀಡಿದ 'ಟಾಮೊಕ್ಸಿಫೆನ್' ಗುಳಿಗೆಗಳನ್ನು ತೆಗೆದುಕೊಂಡಳು. ಇಷ್ಟೆಲ್ಲ ವರ್ಷಗಳು, ಆಕೆಯ ಮಕ್ಕಳಿಗೆ ತಮ್ಮ ತಾಯಿ ಸಾವಿನೊಡನೆ ಹೋರಾಡುತ್ತಿರುವ ವಿಷಯವೇ ತಿಳಿದಿರಲಿಲ್ಲ. ಮಕ್ಕಳ ವಿದ್ಯಾಭ್ಯಾಸ ಮುಗಿಯಿತು. ಮಗಳು ವೈದ್ಯಳಾದಳು. ಮಗ ಎಂ.ಬಿ.ಎ. ಡಿಗ್ರಿ ಪಡೆದ. ಸುದರ್ಶನರ ಹೋರಾಟ ಸಾರ್ಥಕವಾಗಿತ್ತು. ವರ್ಷಗಳು ಉರುಳಿದವು.

ಮಗಳ ಮದುವೆಯಾಗಿತ್ತು. ಒಂದು ದಿನ ಸುದರ್ಶನಗೆ ಏನೋ ತನ್ನ ದೇಹದಲ್ಲಿ ಸರಿ ಇಲ್ಲ ಎನಿಸತೊಡಗಿತು. ಟಾಟಾ ಆಸ್ಪತ್ರೆಯಲ್ಲಿ ದೇಹ ತಪಾಸಣೆ ಮಾಡಿಸಿಕೊಂಡರು. ಎಲ್ಲವೂ 'ನಾರ್ಮಲ್' ಇತ್ತು. ಕೊನೆಗೆ 'ಕ್ಯಾಟ್' ಸ್ಕಾನ್ ಕೂಡಾ 'ನಾರ್ಮಲ್' ಎಂದು ಸಾರಿತು. ಆದರೆ ಮನೆಗೆ ಹಿಂತಿರುಗಿದಾಗ, ಸುದರ್ಶನಗೆ ಹೊಟ್ಟೆಯಲ್ಲಿ ಎಂತಹುದೋ ವಿಚಿತ್ರ ಅನುಭವ. ಎರಡು ತಿಂಗಳ ನಂತರ, ಆಕೆಯ ಅಂಡಾಶಯದಲ್ಲಿ ಕ್ಯಾನ್ಸರ್ ಇರುವುದು ತಿಳಿದು ಬಂದಿತು.

ಮತ್ತೊಮ್ಮೆ ಆಪರೇಷನ್, ಕಿಮೋಥೆರಪಿ, ವಿಪರೀತದ ಅಡ್ಡ ಪರಿಣಾಮಗಳು. ಆದರೆ ಸುದರ್ಶನ ತನ್ನ ಛಿದ್ರವಾದ ದೇಹದ ಬಗೆಗ ಸ್ವಯಂ ಮರುಕ ಪಡುವ ಬದಲು, ಗರ್ಭಿಣಿಯಾದ ಮಗಳ ಆರೈಕೆಯಲ್ಲಿ ತೊಡಗಿದಳು. ಮೊಮ್ಮಗು ಹುಟ್ಟಿದ್ದು ಸುದರ್ಶನಳ ಬದುಕಿನ ಅತ್ಯಂತ ಖುಷಿಯ ಕ್ಷಣವಾಯಿತು. 'ಈ ಸಂತಸವನ್ನು ಕ್ಯಾನ್ಸರ್ ಹಾಳು ಮಾಡಲು ನಾನು ಬಿಡುವುದಿಲ್ಲ' ಸುದರ್ಶನ ನಿರ್ಧರಿಸಿದ್ದರು. ಸಿಸೇರಿಯನ್ ಆಪರೇಷನ್‌ಗೆ ಒಳಗಾದ ಮಗಳು ಸುಧಾರಿಸಿಕೊಳ್ಳುವವರೆಗು ಸುದರ್ಶನ ಮಗುವನ್ನು ನೋಡಿಕೊಂಡರು.

ಇಷ್ಟಕ್ಕೇ ಕ್ಯಾನ್ಸರ್ ಸೋಲೊಪ್ಪಿ ಮರೆಯಾಗಲಿಲ್ಲ. ಲಿಂಫ್ ಗ್ರಂಥಿಗಳಲ್ಲಿ ಕ್ಯಾನ್ಸರ್ ಮತ್ತೆ ಕಾಣಿಸಿಕೊಂಡಿತು. ಮತ್ತೊಂದು ಆಪರೇಷನ್, ಮತ್ತೆ ಕಿಮೋಥೆರಪಿ. ಆದರೆಲ್ಲ ಅಡ್ಡ ಪರಿಣಾಮಗಳು. ಹೀಗಿದ್ದು ಸುದರ್ಶನ ಸೋಲೊಪ್ಪಿಲ್ಲ. ಅವರ ಜೀವನೋತ್ಸಾಹ ಬದುಕಿನ ಬಗ್ಗೆ ಆಸ್ಥೆ ಆಸಕ್ತಿ ಕುಂದಿಲ್ಲ.

ಎರಡು ತಿಂಗಳ ಹಿಂದೆ ಮತ್ತೆ ಕ್ಯಾನ್ಸರ್ ಕತ್ತಿ ಮಸೆದು ನಿಂತಿದೆ. ಈಗ ಸುದರ್ಶನ ಮುಂಬಯಿಯ 'ಬೀಚ್ ಕ್ಯಾಂಡಿ ಆಸ್ಪತ್ರೆ'ಯಲ್ಲಿ ಹೋರಾಡುತ್ತಿದ್ದಾರೆ. ಇಪ್ಪತ್ತೈದು ವರ್ಷಗಳ ಹೋರಾಟವಿದು. ಮಕ್ಕಳಿಗೆ ತಾಯಾಗಿ ಉಳಿಯ ಬಯಸಿದ ಸುದರ್ಶನ, ಬದುಕುವ ಛಲದಲ್ಲಿ ಮೊಮ್ಮಗುವಿಗೆ ಅಜ್ಜಿಯಾದರು. ಅದೇ ಅವರ ಛಲ. ಈ ಬಾರಿಯೂ ಅವರನ್ನು ಉಳಿಸಲಿ ಎಂಬ ಹಾರೈಕೆ.

ಎಂಟು ವರ್ಷಕ್ಕೇ ಸಾಧ್ವಿ!

ಎಂಟು ವರ್ಷದ ಪ್ರಿಯಾಲಳನ್ನು 'ಜೇನ್ ಕೊಠಾರಿ ಸಂಘ' ಸಾಧ್ವಿಯಾಗಿ ಆರಿಸಿದೆ. ಇದರ ವಿರುದ್ಧವಾಗಿ ದನಿಯೆತ್ತಿದ 'ಮಕ್ಕಳ ಹಿತರಕ್ಷಣಾ ಸಮಿತಿ'ಗೆ, 'ಇದು ನಮ್ಮ ಧರ್ಮದ ವಿಷಯ, ಮಧ್ಯೆ ಕಾಲು ತೂರಿಸಬೇಡಿ' ಎಂದು ಕಟ್ಟುನಿಟ್ಟಾಗಿ ಹೇಳಿ ಬಿಟ್ಟಿದೆ. 'ಜೈನ ಶ್ವೇತಾಂಬರ ಮೂರ್ತಿಪೂಜಕ್ ಮಹಾಮಂಡಲ'ದ ಪ್ರಕಾಶ್ ಜಬೇರಿ ವಾದಿಸುತ್ತಾರೆ. 'ಇದು ಮಕ್ಕಳ ಹಿತರಕ್ಷಣಾ ಸಮಿತಿಯ ವ್ಯಾಪ್ತಿಯಲ್ಲಿ ಬರುವುದಿಲ್ಲ. ಪ್ರಿಯಾಲ್ ಈಗ ಪುಣೆಯಲ್ಲಿ ತನ್ನ ಗುರುವಿನೊಡನಿದ್ದಾಳೆ. ಹಿತರಕ್ಷಣಾ ಸಮಿತಿಯ ಎದುರು ಆಕೆಯನ್ನು ನಿಲ್ಲಿಸಬೇಕೆಂದರೆ, ಆಕೆ ಅಷ್ಟೂ ಹಾದಿಯನ್ನು ನಡೆದು ಬರಬೇಕು. ಸಾಧ್ವಿಯಾದ ಹೆಣ್ಣು ಮಗು ನಡೆದೇ ಬರಬೇಕಾಗುತ್ತದೆ. ಹಿತರಕ್ಷಣಾ ಸಮಿತಿ ಈ ಕೇಸನ್ನು ಬಿಡುವುದ ಮೇಲು'. ಪತ್ರಕರ್ತರೊಬ್ಬರು 'ಆ ಹೆಣ್ಣು ಮಗುವಿನ ಹಕ್ಕುಗಳನ್ನು ನೀವು ತಡೆಯುತ್ತಿದ್ದೀರ' ಎಂದು ಕೇಳಿದಾಗ, 'ಆಕೆಗೆ ಸಂಘದೊಳಗೆ ಇನ್ನೂ ಉತ್ತಮ ಬದುಕು ಸಿಗುತ್ತದೆ. ಆಕೆ ಎಲ್ಲರಿಂದಲೂ ಪ್ರೀತಿಸಲ್ಪಡುತ್ತಾಳೆ, ಮುದ್ದಿಸಲ್ಪಡುತ್ತಾಳೆ' ಎಂದು ಪ್ರಕಾಶ್ ವಾದಿಸಿದರು. 'ನಿಮ್ಮ ಮಗುವನ್ನೇ ಇಂಥಾ ಕಠಿಣ ಬದುಕಿಗೆ ದೂಡುತ್ತೀರಾ ?' ಎಂದು ಕೇಳಿದ್ದಕ್ಕೆ, 'ಇಂತಹ ಬದುಕಿಗೆ ಬರಲು ಮಗುವಿಗೆ ಈ ಬದುಕಿನತ್ತ ಆಸಕ್ತಿ ಮತ್ತು ಆಸ್ಥೆ ಬೇಕು. ಪ್ರಿಯಾಲಳಲ್ಲಿ ಅವು ಇವೆ. ಪ್ರತಿಯೊಂದು ಮಗುವಿನಲ್ಲಿ ಇರುವುದಿಲ್ಲ' ಎಂದು ಸಮಜಾಯಿಷಿ ನೀಡಿದ್ದಾರೆ.

ಮೈ ಮನಸ್ಸು ಬೆಳೆಯದ ಎಳೆಯ ವಯಸ್ಸಿಗೆ, ಧರ್ಮದ ಹೆಸರಲ್ಲಿ ಹಿರಿಯರು, ಕಿರಿಯ ಜೀವಗಳನ್ನು ತಾವು ಬಯಸಿದ ಹಾದಿಗೆ ತಳ್ಳುವುದು ತಡೆಯಬೇಕಿದೆ. 'ಮಕ್ಕಳ ಹಿತರಕ್ಷಣಾ ಸಮಿತಿ' ಧರ್ಮದ ವಿಷಯದಲ್ಲಿ ಸೂಕ್ಷ್ಮವಾಗಿದ್ದೂ ಪ್ರಿಯಾಲಳ ಕೇಸಿಗೆ ಪ್ರತಿಕ್ರಿಯೆ ವ್ಯಕ್ತಪಡಿಸಲು ಸಿದ್ಧವಾಗುತ್ತಿದೆ.

ಮಲೇರಿಯಾ ನಿಯಂತ್ರಣದಲ್ಲಿ ಸಮುದಾಯದ ಸಹಭಾಗಿತ್ವ

ಮಲೇರಿಯ ರೋಗವು ಹರಡದಂತೆ ಈ ಕೆಳಕಂಡ ಕ್ರಮಗಳನ್ನು ಅನುಸರಿಸಿ.

- ಯಾವುದೇ ಜ್ವರ ಮಲೇರಿಯ ಇರಬಹುದು. ಆದಷ್ಟು ಶೀಘ್ರವಾಗಿ ರಕ್ತ ಪರೀಕ್ಷೆ ಮಾಡಿಸಿ ಕ್ಲೋರೋಕ್ವಿನ್ ಗುಳಿಗೆಗಳನ್ನು ತೆಗೆದುಕೊಳ್ಳಿ.
- ಮಲೇರಿಯ ಎಂದು ರಕ್ತಪರೀಕ್ಷೆಯಲ್ಲಿ ಖಚಿತಪಟ್ಟಲ್ಲಿ ತಪ್ಪದೇ ತೀವ್ರ ಚಿಕಿತ್ಸೆ ಪಡೆಯಿರಿ. ಈ ಚಿಕಿತ್ಸೆಯ ವಿವರಗಳು ಹಾಗೂ ಗುಳಿಗೆಗಳು ಆರೋಗ್ಯ ಕಾರ್ಯಕರ್ತರಲ್ಲಿ ಹಾಗೂ ಎಲ್ಲಾ ಸರ್ಕಾರಿ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ದೊರಕುತ್ತದೆ.
- ಶಿಶುಗಳ ಮತ್ತು ಗರ್ಭಿಣಿಯರಿಗೆ ಮಲೇರಿಯ ರೋಗವು ಆತಂಕಕಾರಿಯಾಗಿದ್ದು, ಅಂತಹವರು ಯಾವುದೇ ಜ್ವರವಿರಲಿ, ತಡಮಾಡದೇ ವೈದ್ಯರ ಸಲಹೆ ಪಡೆಯುವುದು.
- ನೀರು ಶೇಖರಣಾ ತೊಟ್ಟಿಗಳನ್ನು ಭದ್ರವಾದ ಮುಚ್ಚಳದಿಂದ ಯಾವಾಗಲೂ ಮುಚ್ಚಿರಬೇಕು. ವಾರಕ್ಕೊಮ್ಮೆ ನೀರನ್ನು ಸಂಪೂರ್ಣವಾಗಿ ಖಾಲಿ ಮಾಡಿ, ಒಣಗಿಸಿ ಮತ್ತೆ ಭರ್ತಿ ಮಾಡಿಕೊಂಡಲ್ಲಿ ಇಂತಹ ನೀರು ಶೇಖರಣೆಗಳಲ್ಲಿ ರೋಗವಾಹಕ ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟಬಹುದು.
- ಆರೋಗ್ಯ ಇಲಾಖೆಯು ಕೈಗೊಳ್ಳುವ ಕೀಟನಾಶಕ ಸಿಂಪಡಣಾ ಕಾರ್ಯಕ್ಕೆ ಸಂಪೂರ್ಣ ಸಹಕಾರ ನೀಡಿ.
- ಸದಾ ನೀರಿರುವ ಕೆರೆ, ಕುಂಟೆ, ಬಾವಿ, ತೋಟದ ಕಾರಂಜಿಗಳು ಮುಂತಾದ ತಾಣಗಳಲ್ಲಿ ಸೊಳ್ಳೆಯ ಮರಿಗಳನ್ನು ತಿನ್ನುವ ಗ್ಯಾಂಬೂಸಿಯ ಮತ್ತು ಗಪಿಪ ಎಂಬ ಸಣ್ಣ ಸಣ್ಣ ಮೀನುಗಳನ್ನು ಬಿಡುವುದು.
- ಮನೆಯ ಕಿಟಕಿ ಬಾಗಿಲುಗಳಿಗೆ ಕೀಟ ತಡೆಗಟ್ಟುವ ಜಾಲರಿಗಳನ್ನು ಅಳವಡಿಸಿಕೊಳ್ಳಿ.
- ಮಲಗುವಾಗ ತಪ್ಪದೇ ಸೊಳ್ಳೆ ಪರದೆಯನ್ನು ಉಪಯೋಗಿಸಿ.
- ಸಂಜೆವೇಳೆ ಬೇವಿನ ಹೊಗೆ ಹಾಕುವುದು, ಸಾಮ್ರಾಣಿ ಧೂಪ ಹಾಕುವುದು ಹಾಗೂ ರಾತ್ರಿ ವೇಳೆ ಇತರ ಸೊಳ್ಳೆ ನಿರೋಧಕ ವಿಧಾನಗಳನ್ನು ಬಳಸಿ ಸೊಳ್ಳೆ ಕಡಿತದಿಂದ ದೂರವಿರಿ.
- ಹರಿಯದೇ ನಿಂತ ನೀರು-ಸೊಳ್ಳೆ ಉತ್ಪತ್ತಿಯ ತವರು. ಮನೆಯ ಸುತ್ತ ಮುತ್ತ ನೀರು ನಿಲ್ಲದಂತೆ ಎಚ್ಚರ ವಹಿಸಿ ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟಿರಿ.

ಶೀಘ್ರ ಪತ್ತೆ - ತ್ವರಿತ ಚಿಕಿತ್ಸೆಯಿಂದ ಸಾವು ನೋವುಗಳನ್ನು ತಡೆಗಟ್ಟಲು ಖಂಡಿತ ಸಾಧ್ಯ.

ಕರ್ನಾಟಕ ವಾರ್ತೆ.

CPMG/KA/BG-8/2003-05 RNI No. 45577/88

Posted at Basavanagudi P.O. On the 25th of every Month

"Achala" 108, Skyline Surabhi,
14 - P , Vidyapeeta Road,
BSK III Stage,
Bangalore - 560 085

To :

Smt/Sri